MYSORE LEGISLATIVE COUNCIL

Saturday, 29th July 1961

MOTION *RE*: FLOOD SITUATION IN THE STATE, 1961.

(Debate continued)

[MR. CHAIRMAN in the Chair.]

9-05 A.M.

Mr. CHAIRMAN.—We will take up the discussion on flood situation first instead of consideration of Bills.

*ಶ್ರೀ ಎಚ್. ಎಫ್. ಕಟ್ಟೀಮನಿ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈ ವರ್ಷ ನಮ್ಮ ರಾಜ್ಯದಲ್ಲಿ ಈ ನೆರೆಯ ಹಾವಳಿಯು ಪ್ರಕೋಪ ವಿಶೇಷವಾಗಿದ್ದು ಅಭೂತಪೂರ್ವವಾದ ಹಾನಿ ನಮ್ಮ ರಾಜ್ಯಕ್ಕೆ ಆಗಿದೆ. ನನ್ನ ಅನುಭವದಲ್ಲಿ ಕಳೆದ 60 ವರ್ಷಗಳಿಂದಲೂ ಇಂಥಾ ಅನಾಹುತ ನಮ್ಮ ಕರ್ನಾಟಕ ದೇಶದಲ್ಲಿ ಆಗಿರಲಿಲ್ಲ ಎಂದು ಹೇಳಬಹುದು. 1913-14ನೆಯ ಇಸವಿಯಲ್ಲಿ ಸ್ವಾತಿ ಮಳೆಯ ದೆಶೆಯಿಂದ ಮಾಳಿಗೆ ಮನೆಗಳೇ ಜೋರಿ ಬಿದ್ದು ಹೋದುವು. ಈ ಸಾರಿ ಹೊಲ, ಮನೆ ಮೊದಲಾದುವುಗಳು ಕೊಚ್ಚಿಹೋಗಿ ನದಿಗಳು ಅತಿರೇಕದಿಂದ ಹರಿದು ಏನು ಅನಾಹುತವಾಗಿದೆ, ಅಷ್ಟು ಎಂದೂ ಆಗಿರಲಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಸಂಕ್ಷಿಪ್ತವಾಗಿ ಸಾಕಾದಷ್ಟು ವಿವರವಾದ ವರದಿಯನ್ನು ಒಪ್ಪಿಸಿದ್ದಾರೆ. ಅಲ್ಲಲ್ಲಿರುವ ಹಳ್ಳಿಗಳೆಲ್ಲಾ ನಾಶವಾಗಿ ಹೋಗಿವೆ ಮತ್ತು ಸಾರಿಗೆ ಸಂಪರ್ಕ ಎಲ್ಲಾ ಕಡಿದು ಹೋಗಿದೆ ಮತ್ತು ಬೆಳೆ ಮೊದಲಾದುವುಗಳೆಲ್ಲಾ ಹಾಳಾಗಿ ಹೋಗಿವೆ. ಇದೆಲ್ಲವನ್ನೂ ಹೇಳಿದ್ದಾರೆ. ಈ ವರ್ಷ ಮೊಟ್ಟ ಮೊದಲು ಅನಾಹುತವಾದದ್ದು ಮೇ ತಿಂಗಳಿನಲ್ಲಿ,—ಅದು ಕಾರವಾರ ಮತ್ತು ಧಾರವಾಡದಲ್ಲಿ. ಕಾಳೀ ನದಿಯಲ್ಲಿ ಪ್ರವಾಹ ಬರುವುದು ಇಪ್ಪೊತ್ತು ನಿನ್ನೆಯದಲ್ಲ; ಅದಕ್ಕೆ ಈ ನದಿಗೆ ಆ ಪ್ರದೇಶದಲ್ಲಿ ಕರೇ ಹೊಳೆ ಎಂದು ಕರೆಯುತ್ತಿದ್ದರು. ಕರೇ ಹೊಳೆ ಹೋಗಿ ಕಾಳೀ ನದಿ ಎಂದು ಪ್ರಚಾರಕ್ಕೆ ಬಂದಿದೆ. ಅದೇ ರೀತಿ ಗಂಗವಳ್ಳಿ ಮತ್ತು ಅಘನಾಶಿನಿ ನದಿಗಳಲ್ಲೂಪ್ರವಾಹ ಬಂದು ಬಹಳ ಅನಾಹುತಗಳಾಗಿವೆ. ಅದರಲ್ಲೂ ಫಾರೆಸ್ಟ್ ಕಂಟ್ರಾಕ್ಟರುಗಳು ಯಾರಿದ್ದಾರೆಯೋ ಅವರಿಗೆ ದೊಡ್ಡ ದೊಡ್ಡ ಮರದ ತೊಲೆಗಳು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗಿ ಸಾಧಾರಣವಾಗಿ 19-20 ಲಕ್ಷದವರೆಗೂ ಹಾನಿಯಾಗಿದೆ. ಎಷ್ಟೋ ಜನರಿಗೆ ಬಹಳ ನಷ್ಟವಾಗಿ, ಅವರ ವ್ಯಾಪಾರವೆಲ್ಲಾ ಕೆಟ್ಟು ಹೋಗಿ ಬಹಳ ದುಸ್ಥಿತಿಯಲ್ಲಿದ್ದಾರೆ. ಮನೆಗಳು ಬಿದ್ದುಹೋಗಿವೆ. ಬತ್ತದ ಬೆಳೆಗೆ ನಷ್ಟವಾಗಿದೆ, ರಸ್ತೆ ಸಾರಿಗೆ ಕೆಟ್ಟಿದೆ. ಆದರೆ ವಿಶೇಷವಾದಂಥ ಹಾನಿ ಆದದ್ದು ಫಾರೆಸ್ಟ್ ಕಂಟ್ರಾಕ್ಟರುಗಳಿಗೆ. ಇದು ಮೊದಲಿಗೆ ಆದದ್ದು ಮೇ ತಿಂಗಳಿನಲ್ಲಿ, ತದನಂತರ ಜೂನ್‌ನಿಂದ ಇಪ್ಪೊತ್ತಿನವರೆಗೂ ಹಾನಿಯಾದದ್ದು ಧಾರವಾಡ ಜಿಲ್ಲೆಯಲ್ಲಿ, ಹಾವೇರಿ, ಶಿಗ್ಗಾವಿ ಮತ್ತು ಹಾನಗಲ್ ತಾಲ್ಲೂಕುಗಳಲ್ಲಿ ಆಗಿದೆ. ಹಾವೇರಿಯಲ್ಲಿ ಸುಮಾರು 34 ಹಳ್ಳಿಗಳಿಗೆ ಬಹಳ ಹಾನಿಯಾಗಿದೆ. ಅದರಲ್ಲಿ 10 ಹಳ್ಳಿಗಳು ಪೂರ್ಣವಾಗಿ ನಾಶವಾಗಿವೆ. ಮನೆಗಳು ಒಂದೂ ಉಳಿದಿಲ್ಲ. ಅದರಂತೆ ಹಾನಗಲ್ ತಾಲ್ಲೂಕಿನಲ್ಲಿ 5 ಹಳ್ಳಿಗಳಿಗೆ ಬಹಳ ಹಾನಿಯಾಗಿದೆ. 2 ಹಳ್ಳಿಗಳು ಪೂರ್ಣವಾಗಿ ನಾಶವಾಗಿವೆ. ಶಿಗ್ಗಾವಿಯಲ್ಲಿ ಒಂದು ಹಳ್ಳಿ ನಾಶವಾಗಿದೆ. 14 ಹಳ್ಳಿಗಳಲ್ಲಿ ಯಾವ ಮನೆಗಳೂ ಇಲ್ಲ. ಸಂಪರ್ಕ ಕಡಿದು ಹೋಗಿದೆ. ಮೊನ್ನೆ ಮೊನ್ನೆ ಕಾಂಗ್ರೆಸ್ ಎಂ.ಪಿ.ಸಿ.ಸಿ. ಅಧ್ಯಕ್ಷೆ ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀ ಹಳ್ಳಿ ಕೇರಿ ಅವರು ಮತ್ತು ಮಾನ್ಯ ಮಂತ್ರಿಗಳಾದ ಶ್ರೀ ಕೆ. ಎಫ್. ಪಾಟೀಲ್ ಅವರು ಆ ಭಾಗಕ್ಕೆ ಹೋಗಿದ್ದರು. ಶ್ರೀಮಾನ್ ನಿಜಲಿಂಗಪ್ಪನವರು ದೋಣಿಯಲ್ಲಿ ಒಂದು ದಿವಸ ಪೂರ್ಣ ಸಂಚಾರ ಮಾಡಿ 8-10 ಕಡೆ ನೋಡಿದ್ದಾರೆ. ಹಲಸೂರು ಎಂಬ ಹಳ್ಳಿಯಲ್ಲಿ—ಪತ್ರಿಕೆಯಲ್ಲಿ ಈ ಸುದ್ದಿ ಬಂದಿತ್ತು—200 ಜನರು ಯಾವ ಆಶ್ರಯವೂ ಇಲ್ಲದೇ 2-3ದಿವಸ ಇರಬೇಕಾಯಿತು. ಸರ್ಕಾರದವರು ಸಹ ಮಿಲಿಟರಿ ಸಹಾಯವನ್ನು ತೆಗೆದುಕೊಂಡು ನೆರವು ನೀಡಿದರು. ಅಂಬಿಗರು ದೋಣಿಗಳನ್ನು ತೆಗೆದುಕೊಂಡು ಹೋಗಿ ಜನರನ್ನು ಬದುಕಿಸಿದರು. ಜನಗಳ ಕಷ್ಟವನ್ನು ಸಾಕಷ್ಟು ನಿವಾರಣೆ ಮಾಡಿದ್ದಾರೆ. ಈಗ ಮನೆ ಮಠಗಳನ್ನು ಕಳೆದುಕೊಂಡು ಕಷ್ಟದಲ್ಲಿರುವವರಿಗೆ ವಸತಿ ಸೌಕರ್ಯವನ್ನು ಒದಗಿಸಬೇಕು. ಅದಕ್ಕೋಸ್ಕರ ಅವರಿಗೆ ತಗಡು, ಬೊಂಬು ಮುಂತಾದುವುಗಳನ್ನು ಕಳುಹಿಸಿ ಟೆಂಪೊರರಿ ಷೆಡ್ಡುಗಳನ್ನು ಕಟ್ಟಿ ಅವರು ಇರಲಿಕ್ಕೆ ವ್ಯವಸ್ಥೆ ಮಾಡಿಕೊಡುವುದು ಜರೂರಾಗಿದೆ. ಆ ಮೇಲೆ ಪೆಟ್ಟಿನ ಸಂರಕ್ಷಣೆ ಕೊಡಬೇಕು. ಮಳೆ ಒಂದೇ ಸಮನಾಗಿ ಬೀಳುತ್ತಾ ಇದ್ದುದರಿಂದ ಜನಗಳಿಗೆ ಸಾಕಷ್ಟು ಸಹಾಯವನ್ನು ಒದಗಿಸಲು ಸಾಧ್ಯವಾಗಿಲ್ಲ. ಆದರೂ ಸಹ ಸರ್ಕಾರಿ ಅಧಿಕಾರಿಗಳು ಸಾಕಷ್ಟು ಸಹಾಯವನ್ನು ಮಾಡಲು ಪ್ರಯತ್ನ ಮಾಡಿದ್ದಾರೆ. ಜನಗಳಿಗೆ ಎಷ್ಟು ಸಹಾಯ ಸಿಕ್ಕಬೇಕೋ ಅಷ್ಟು ಸಹಾಯ ಸಿಕ್ಕಿಲ್ಲ. ಅವರಿಗೆ ಇರಲಿಕ್ಕೆ ವಸತಿ, ತಿನ್ನುವುದಕ್ಕೆ ಆಹಾರಬೇಕು ಬಟ್ಟೆ ಮತ್ತು ಕಂಬಳಿಗಳೂಬೇಕು. ಅವರ ಸ್ಥಿತಿ ತುಂಬಾ ಚಿಂತಾಜನಕವಾಗಿರುವುದರಿಂದ ಅವರಿಗೆ ಎಷ್ಟು ಸಹಾಯ ಸಿಕ್ಕಬೇಕೋ ಅಷ್ಟು ಸಹಾಯವನ್ನು ಅವರಿಗೆ ಮುಟ್ಟಿಸುವುದಕ್ಕೆ ಅವಕಾಶವಿರಲಿಲ್ಲ; ದಾರಿಯೂ ಸಹ ಇರಲಿಲ್ಲ. ದೋಣಿಯಲ್ಲಿ ಕುಳಿತುಕೊಂಡು ನದಿಯನ್ನು ದಾಟಿ ಊರನ್ನು ಮುಟ್ಟಬೇಕು. ಅಂಥಾ ಪರಿಸ್ಥಿತಿ ಇದೆ. ಆದುದರಿಂದ ಪ್ರವಾಹದಿಂದ ನೊಂದು ತೊಂದರೆ ಪಡತಕ್ಕಂಥ ಜನಗಳಿಗೆ ತಗಡು, ಬೊಂಬು ಮುಂತಾದ ಸಾಮಗ್ರಿಗಳನ್ನು ಕೊಡುವುದು ಒಳ್ಳೆಯದು.

*Asterisk indicates that the remarks or speeches have not been revised by the member concerned.

(ಶ್ರೀ ಎಚ್. ಎಫ್. ಕಟ್ಟೀಮನಿ)

ನುಮಾರು 12 ಹಳ್ಳಿಗಳು ಬಹಳ ದುಸ್ತರವಾದ ಕಷ್ಟದಲ್ಲಿ ಇದ್ದುದರಿಂದ ಅವರು ಅನುಭವಿಸುತ್ತಿರುವ ಕಷ್ಟವನ್ನು ಕಣ್ಣಿನಿಂದ ನೋಡುವುದಕ್ಕೂ ಕೂಡ ಅಸಾಧ್ಯ. ನಾನೇನು ಅಲ್ಲಿಗೆ ಖುದ್ದಾಗಿ ಹೋಗಿ ನೋಡಿ ಬಂದಿಲ್ಲ. ಬೆಂಗಳೂರಿಗೆ ಬಂದ ನಂತರ ವರದಿಯನ್ನು ನೋಡಿ ವಿಷಯವನ್ನು ತಿಳಿದುಕೊಂಡೆ. ನಾನು ಟ್ರೈನಿನಲ್ಲಿ ಬರುವಾಗ ನೋಡಿದೆ. ವರದಾ ನದಿ ಒಂದು ಸಣ್ಣ ನದಿ. ಆದರಲ್ಲಿ ಇಂಥಾ ಪ್ರವಾಹ ಯಾವಾಗಲೂ ಬಂದಿರಲಿಲ್ಲ. ಕೃಷ್ಣಾ ನದಿಯಲ್ಲಿ ಯಾವ ಪ್ರಮಾಣದಲ್ಲಿ ಪ್ರವಾಹ ಬರುತ್ತದೆಯೋ ಆ ಪ್ರಮಾಣದಲ್ಲಿ ವರದಾ ನದಿಯಲ್ಲಿ ಪ್ರವಾಹ ಬಂದಿದೆ. ಆದುದರಿಂದ ಜನಗಳಿಗೆ ಅಷ್ಟೊಂದು ಅತೀವ ಹಾನಿಯುಂಟಾಗಿದೆ. ಆದ ದರಿಂದ ಅವರಿಗೆ ಆದಷ್ಟು ಜಾಗ್ರತೆಯಾಗಿ ತಗಡುಗಳನ್ನೂ, ಬೊಂಬುಗಳನ್ನೂ ಒದಗಿಸಿ ಕೊಡಬೇಕು. ಮತ್ತು ತಾತ್ಕಾಲಿಕವಾಗಿ ಅವರು ವಾಸಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕು; ಆಹಾರ ಮತ್ತು ಬಟ್ಟೆಗಳನ್ನು ಒದಗಿಸಬೇಕು. ಅಲ್ಲಿ ರೋಗಗಳು ಹುಟ್ಟುವುದಕ್ಕೆ ಅವಕಾಶವಿದೆ. ಆದುದರಿಂದ ಅವರಿಗೆ ಆರೋಗ್ಯ ರಕ್ಷಣೆಯನ್ನು ಕೊಟ್ಟು ಅವರನ್ನು ಸಂರಕ್ಷಣ ಮಾಡುವಂಥಾದ್ದು ಅವಶ್ಯ ಇದೆ. ಅವರು ನುಮಾರು 15 ದಿವಸಗಳಿಂದಲೂ ಕಷ್ಟದಲ್ಲದ್ದಾರೆ. ಸರ್ಕಾರದವರು ಅವರಿಗೆ ಸಹಾಯ ಮಾಡಲಿಲ್ಲ ಎಂದು ನಾನು ಹೇಳುವುದಿಲ್ಲ; ಸಾಕಷ್ಟು ಸಹಾಯವನ್ನು ನೀಡುತ್ತಿದ್ದಾರೆ. ಆದರೂ ಜನರು ಹೆಚ್ಚು ಕಷ್ಟದಿಂದ ಇರುವುದರಿಂದ ಅವರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ನೀಡುವಂಥಾದ್ದು ಅವಶ್ಯ ಇದೆ ಎಂದು ನಾನು ಹೇಳುತ್ತೇನೆ. ಕೊಟ್ಟಿಗೆರೆಯಲ್ಲಿ 312 ಇಂಚು, ಚಿರಾಪುಂಜಿಯಲ್ಲಿ 500 ಇಂಚು ಮಳೆ ಆಗುತ್ತದೆ. ಈ ಸಾರಿ ಮಳೆ ಆದದ್ದನ್ನು ನೋಡಿದರೆ ಕೊಟ್ಟಿಗೆರೆ, ಮೂಡಿಗೆರೆ, ಚಿಕ್ಕ ಮಗಳೂರು ಮತ್ತು ಚಿರಾಪುಂಜಿ ಈ ಸ್ಥಳಗಳಲ್ಲಿ ಯಾವ ಪ್ರಮಾಣದಲ್ಲಿ ಮಳೆ ಯಾಗುತ್ತದೆಯೋ ಆ ಪ್ರಮಾಣದಲ್ಲಿ ನಮ್ಮ ಕಡೆ ಮಳೆ ಆಗಿದೆ. ನಾಲ್ಕೈದು ವಾರಗಳು ಒಂದೇ ಸಮನಾಗಿ ಮಳೆ ಆದದ್ದರಿಂದ 312 ಇಂಚಿನವರೆಗೂ ಮಳೆಯಾಗಿದೆ ಎಂದು ಹೇಳುತ್ತಾರೆ. ಇಡೀ ವರ್ಷದಲ್ಲಿ ಆಗತಕ್ಕಂಥ ಮಳೆ ಈಗ ಆಗಿದೆ. ಮಾನ್ಯ ಸದಸ್ಯರೊಬ್ಬರು ಹೇಳಿದರು, ಕೊಳ್ಳೇಗಾಲದಲ್ಲಿ ಕುಡಿಯುವುದಕ್ಕೆ ನೀರಿಲ್ಲ ಎಂದು. ಆದರೂ ಕೂಡ ನದಿಯ ಪ್ರವಾಹದಿಂದ ಅನೇಕ ಜನಗಳಿಗೆ ನಷ್ಟವಾಗಿದೆ. ಈ ರೀತಿ ನಾನಾ ಕಡೆ ಮಹಾ ಪೂರ ಬಂದು ವಿಶೇಷವಾಗಿ ಹಾನಿಯಾಗಿದೆ. ನಮ್ಮ ಸರ್ಕಾರದವರೂ ಪ್ರವಾಹದಿಂದ ನೊಂದ ಜನಗಳಿಗೆ 50 ಲಕ್ಷ ರೂಪಾಯಿಗಳ ಇಂಟರೆಸ್ಟ್ ಫ್ರೀ ಲೋನ್ ಅನ್ನೂ 5 ಲಕ್ಷ ರೂಪಾಯಿಗಳನ್ನೂ ಉಚಿತವಾಗಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೆ ಇಷ್ಟು ಹಣ ಸಾಕಾಗುವುದಿಲ್ಲ. ಆ ಬಗ್ಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದವರ ಸಹಾಯವನ್ನೂ ನಮ್ಮ ಸರ್ಕಾರದವರು ಬೇಡಿದ್ದಾರೆಂದು ನಾನು ಕೇಳಿದೆ. ಆದರೆ ಅವರಿಂದ ನಮಗೆ ಎಷ್ಟು ಸಹಾಯ ಸಿಕ್ಕುತ್ತದೆ ಎಂಬುದನ್ನು ಹೇಳಲಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರವನ್ನು ಕೊಡುವಾಗ ಕೇಂದ್ರ ಸರ್ಕಾರದವರಿಂದ ನಮಗೆ ಎಷ್ಟು ಸಹಾಯ ಸಿಕ್ಕುತ್ತದೆ ಎಂಬುದನ್ನು ಹೇಳಬೇಕು. ಮತ್ತು ಇದುವರೆಗೆ ಎಷ್ಟು ಸಹಾಯ ಬಂದಿದೆ ಎಂಬುದನ್ನೂ ಸಹ ಹೇಳಬೇಕು. ಮಹಾರಾಷ್ಟ್ರದಲ್ಲ, ಪುಣೆಯಲ್ಲಿ ಈಸಾರಿ ಬಹಳ ಅನಾಹುತವಾಗಿದೆ. ಹಿಂದೆ ಪುಣೆಯಲ್ಲಿ 1912-13ನೆಯ ಇಸವಿಯಲ್ಲಿ ನಾವು ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಇದೇ ರೀತಿ ಪ್ರವಾಹ ಬಂದಿತ್ತು. ಆದರೆ ಈ ಸಾರಿ ಬಂದಂಥ ಪ್ರವಾಹ ಅದಕ್ಕಿಂತಲೂ ಹೆಚ್ಚಿನದು. ಈ ವಿಷಯವನ್ನು ಕೇಳಿ ಜನಗಳೆಲ್ಲರೂ ಸಹ ವಿಸ್ಮಯಪಟ್ಟರು. ಈ ರೀತಿ ಅಲ್ಲಿ ಅಷ್ಟೊಂದು ಅನಾಹುತವಾಗುವುದಕ್ಕೆ ಕಾರಣವೇ ನೆಂದರೆ ಅಲ್ಲಿರತಕ್ಕ ದೊಡ್ಡ ದೊಡ್ಡ ಕೆರೆಗಳು ಒಡೆದ ದ್ದರಿಂದ ಅಷ್ಟೊಂದು ಅನಾಹುತವಾಗಿದೆ. ಇಂಜಿನಿಯರುಗಳ ಅಲಕ್ಷ್ಯ ಆದಕ್ಕೆ ಕಾರಣವಾಗಿದೆ ಆದುದರಿಂದ ನಮ್ಮ ಕಟ್ಟಡಗಳು ಮತ್ತು ಕೆರೆಗಳು ಏನಿವೆ, ಅವುಗಳನ್ನು ಅತಿವೃಷ್ಟಿಯಾದರೂ, ಹೊಳೆಗಳು ಬಂದರೂ ಕೂಡ ಅವುಗಳು ಒಡೆಯದೆ ಇರುವಹಾಗೆ ಉಪಾಯಗಳನ್ನು ಮಾಡಿ ಚೆನ್ನಾಗಿ ಕಟ್ಟಬೇಕು. ಇದಕ್ಕೆ ನಿರಂತರವಾದ ಒಂದು ಯೋಜನೆಯನ್ನು ಮಾಡಬೇಕು. ಈಗ ತಾತ್ಕಾಲಿಕವಾಗಿ ಮಾಡತಕ್ಕ ಕೆಲಸ ಹೆಚ್ಚು ಇರುವುದರಿಂದ ಈಗ ನಮ್ಮ ಸರ್ಕಾರದವರು ಈ ಬಗ್ಗೆ ಎಷ್ಟು ಹಣವನ್ನು ಒದಗಿಸಿದ್ದಾರೆಯೋ ಅದು ಸಾಲದು. ಇನ್ನೂ ಹೆಚ್ಚಿನ ಸಹಾಯವನ್ನು ಮಾಡಬೇಕು. ಆದುದರಿಂದ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ಕೋಟಿ ಗಟ್ಟಲೆ ಹಣವನ್ನು ಬೇಡಿ ಅವರಿಂದ ಸಹಾಯವನ್ನು ಪಡೆಯಬೇಕು. ನಮ್ಮ ಭಾಗದಲ್ಲಿ ಈ ಪ್ರವಾಹದಿಂದ ಹಾವೇರಿ ತಾಲ್ಲೂಕಿನಲ್ಲಿ 54 ಹಳ್ಳಿಗಳಿಗೆ ಹಾನಿಯಾಗಿದೆ. 11 ಹಳ್ಳಿಗಳು ಹಾಳಾಗಿವೆ. ಅವುಗಳ ಪುನರ್ವಸತಿ ಕಾರ್ಯ ಅವಶ್ಯವಾಗಿದೆ. ಚಿಕ್ಕಮಗಳೂರು, ಮತ್ತು ಕೊಡಗಿನಲ್ಲಿ ವಿಶೇಷವಾಗಿ ಹಾನಿಯಾಗಿದೆ. ಆದದುರಿಂದ ಸರ್ಕಾರದವರು ಆ ಪ್ರದೇಶದಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡಬೇಕು. ಜನಗಳಲ್ಲಿ ಒಂದು ನಂಬಿಕೆಯನ್ನು ರೂಪಿಸುವಷ್ಟು ದಕ್ಷತೆ ಮತ್ತು ಆಕಾಂಕ್ಷೆಯಿಂದ ಕೆಲಸ ಮಾಡಬೇಕು. ಪ್ರವಾಹದಿಂದ ತೊಂದರೆಯುಂಟಾಗಿರತಕ್ಕ ಜನಗಳಿಗೆ ಎಷ್ಟು ಸಹಾಯ ಮಾಡಬೇಕಾಗಿತ್ತೋ ಅಷ್ಟು ಸಹಾಯವನ್ನು ಮಾಡಲಿಲ್ಲ ಎನ್ನುವ ಅಭಿಪ್ರಾಯ ಅವರಿಗೆ ಬರಬಾರದು. ಮಾನ್ಯ ಮಂತ್ರಿಗಳು ಬೇರೆ ಬೇರೆ ಭಾಗಗಳಲ್ಲಿ ಸಂಚಾರಮಾಡಿ ಜನಗಳಿಗೆ ಯೋಗ್ಯ ಸಹಾಯವನ್ನು ಮಾಡಬೇಕು. ನಾಳೆಯಿಂದ ಈ ಅಧಿವೇಶನವನ್ನು ನಿಲ್ಲಿಸಿ ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಸದಸ್ಯರುಗಳೂ ಆಯಾ ಭಾಗಗಳಿಗೆ ಹೋಗಿ ಪರಿಶೀಲನೆಮಾಡಿ ಜನಗಳಿಗೆ ಸಮಾಧಾನ ಹೇಳಿ ಸಹಾಯವನ್ನು ನೀಡಿದರೆ ನಮ್ಮ ಸರ್ಕಾರದ ಮೇಲಾಗಲೀ ಮಾನ್ಯ ಸದಸ್ಯರ ಮೇಲಾಗಲೀ ಯಾವ ಆಕ್ಷೇಪಣೆಯೂ ಬಾರದೆ ಜನಗಳ ವಿಶ್ವಾಸ ಉಳಿಯುತ್ತದೆ. ಇಲ್ಲದಿದ್ದರೆ ಜನಗಳಿಗೆ ಸರ್ಕಾರದ ಮೇಲೆ ಇರತಕ್ಕ ವಿಶ್ವಾಸ ಹೋಗಿ ಮುಂದೆ ನಮ್ಮ ಮೂರನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಇಂಥಾ ಪರಿಸ್ಥಿತಿಯಲ್ಲಿ ಸರ್ಕಾರದವರು ತುರ್ತು ಕ್ರಮವನ್ನು ಕೈಗೊಂಡು ಕಾನೂನು, ಕಾಯಿದೆ ರೂಲ್ಸ್ ಯಾವುದನ್ನೂ ನೋಡದೆ ಪ್ರವಾಹದಿಂದ ನೊಂದ ಜನಗಳಿಗೆ ಪರಿಹಾರವನ್ನು ನೀಡುವಂಥಾದ್ದು ಅತ್ಯಂತ ಅವಶ್ಯವಾದದ್ದು. ಅದೇ ರೀತಿ ನಮ್ಮ ಸರ್ಕಾರದವರು ತುರ್ತು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಜಿ. ವಿ. ಅಂಜಿನಪ್ಪ (ಪದವೀಧರರ ಕ್ಷೇತ್ರ).— ಮಾನ್ಯ ಸಭಾಪತಿಯವರೆ, ಒಂದು ಕಡೆ ಪ್ರಕೃತಿಯ ವಿಕೋಪದಿಂದ ನಮ್ಮ ದೇಶದ ಐದಾರು ಜಿಲ್ಲೆಗಳು ಅತಿವೃಷ್ಟಿಗೆ ಈಡಾಗಿರುವಾಗ ಇನ್ನು ಕೆಲ ಜಿಲ್ಲೆಗಳು

ಅಂದರೆ ಕೋಲಾರ, ಚಿತ್ರದುರ್ಗ, ತುಮಕೂರು ಮತ್ತು ಬಳ್ಳಾರಿ—ಇವು ಅನಾವೃಷ್ಟಿಗೀಡಾಗಿ ಮಳೆ ಬಾರದೆ ಜನರು ಬಹಳ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೆ. ದನಗಳಿಗೆ ಮೇವಿಲ್ಲದೆ, ಜನರಿಗೆ ಆಹಾರ ವಿಲ್ಲದೆ ತೊಂದರೆಯಾಗಿದೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು ಅವರ ಆದ್ಯ ಕರ್ತವ್ಯ. ನಮ್ಮ ಸರ್ಕಾರ ಸಹಾಯಮಾಡಿಲ್ಲವೆಂದು ಹೇಳುತ್ತಿಲ್ಲ; ಮಾಡಿರತಕ್ಕದ್ದು ಸಾಲದು, ಅದನ್ನು ಸಕಾಲದಲ್ಲಿ ಮಾಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರದವರೇನೋ ಈಗ ಅಂಕಿಅಂಶ, ವರದಿಗಳನ್ನು ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚು ವಿಷಯ ಪತ್ರಿಕೆಗಳ ಮೂಲಕ ತಿಳಿದಿದ್ದೇವೆ. ಜೊತೆಗೆ ಜನರು ಪ್ರವಾಹಪೀಡಿತರಾಗಿ ಪ್ರಾಣ ಕಳೆದುಕೊಂಡು ತೊಂದರೆ ಅನುಭವಿಸುತ್ತಿರುವಾಗ ನೆರೆ ರಾಜ್ಯಗಳಲ್ಲಿ, ಮಹಾರಾಷ್ಟ್ರ, ಮದ್ರಾಸು ಮತ್ತು ಕೇರಳಗಳಲ್ಲಿ ಮಂತ್ರಿಗಳು ತಮ್ಮ ದಿನನಿತ್ಯದ ಕೆಲಸ ಬಿಟ್ಟು ಮೋಟಾರು ಕಾರುಗಳಲ್ಲಲ್ಲದೆ ವಿಮಾನ ಗಳಲ್ಲೂ ಕೂಡ ಸಂಚಾರ ಮಾಡಿ ಪ್ರವಾಹಪೀಡಿತರಿಗೆ ತೀವ್ರವಾಗಿ ಸಹಾಯ, ನೆರವು ನೀಡಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ನಮ್ಮ ಮಂತ್ರಿಗಳು ಕೂಡ ಏನೇನೂ ಮಾಡಿಲ್ಲವೆಂದು ಹೇಳುವುದಿಲ್ಲ. ಆದರೆ ಅವರೂ ಇನ್ನೂ ಹೆಚ್ಚಿನ ಸಹಾಯ ಸೌಲಭ್ಯ ಸಕಾಲ ದಲ್ಲಿ ಒದಗಿಸಬಹುದಾಗಿತ್ತೆಂದು ನಾನು ತಿಳಿದುಕೊಂಡಿದ್ದೇನೆ. ಹೆಚ್ಚಿನ ಅಂಕಿಸಂಖ್ಯೆಗಳನ್ನು, ಕರಾರು ವಾಕ್ಕಾದ ಅಂಶಗಳನ್ನು ನಮಗೆ ಒದಗಿಸಲಿಕ್ಕೆ ಸಾಧ್ಯ ವಾಗದಿದ್ದರೂ ಸಹ ಇನ್ನೂ ಹೆಚ್ಚಿನ ಪ್ರಯತ್ನ ಈ ದಿಕ್ಕಿ ನಲ್ಲಿ ಮಾಡಬಹುದಾಗಿತ್ತೆಂದು ತಿಳಿದುಕೊಂಡಿದ್ದೇನೆ. ನಿನ್ನೆತಾನೆ ಪ್ರಧಾನಮಂತ್ರಿಗಳು ಇಲ್ಲಿಗೆ ಬಂದಿದ್ದರು. ಅವರಿಗೆ ನಮ್ಮ ಮುಖ್ಯಮಂತ್ರಿಗಳು ಇಲ್ಲಿನ ಪರಿಸ್ಥಿತಿ ಯನ್ನು ಅರಿಕೆಮಾಡಿ, ಅವರನ್ನು ಇಲ್ಲಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಆಗಿ ರುವ ನಷ್ಟವನ್ನ ತೋರಿಸಿ ಹೆಚ್ಚಿನ ನೆರವು ಪಡೆಯ ಬಹುದಾಗಿತ್ತು. ಅವರು ಆ ಪ್ರದೇಶಗಳಲ್ಲಿ ಸಂಚಾರ ಮಾಡಿದ್ದರೆ ಅವರಿಗೆ ಪರಿಸ್ಥಿತಿ ಮನವರಿಕೆಯಾಗು ತ್ತಿತ್ತು, ಇನ್ನೂ ಹೆಚ್ಚಿನ ಸಹಾಯ, ನೆರವು, ಧನ ಸಹಾಯ ಕೇಂದ್ರದಿಂದ ಪಡೆಯಲು ಅನುಕೂಲವಾಗು ತ್ತಿತ್ತು. ನಿನ್ನೆ ಅವರು ಪ್ರವಾಹದ ಹಾನಿಯ ವಿಚಾರ ವನ್ನುಪ್ರಸ್ತಾಪ ಮಾಡುವಾಗ ಪೂರಾದ ವಿಚಾರಮಾತ್ರ ಪ್ರಸ್ತಾಪಿಸಿದರೇ ಹೊರತು ಮೈನೂರಿನ ವಿಚಾರ ಪ್ರಸ್ತಾಪಿಸಲಿಲ್ಲ. ಅದನ್ನು ನೋಡಿದರೆ ನಮ್ಮ ದೇಶ ಕ್ಕಾಗಿರುವ ತೊಂದರೆ ಅಷ್ಟಾಗಿ ಅವರಿಗೆ ಮನವರಿಕೆ ಯಾಗಿಲ್ಲವೆಂದು ತೋರುತ್ತದೆ. ಸರ್ಕಾರದವರು ಇನ್ನೂ ಹೆಚ್ಚು ಶ್ರದ್ಧೆ ವಹಿಸಿ ಮಾಹಿತಿಯನ್ನೊದಗಿಸಿ ನಷ್ಟಕ್ಕೀಡಾಗಿರುವ ಪ್ರದೇಶಗಳಿಗೆ ಪ್ರಧಾನ ಮಂತ್ರಿಗಳನ್ನು ಕರೆದುಕೊಂಡು ಹೋಗಿದ್ದರೆ ಇನ್ನೂ ಹೆಚ್ಚು ಸಹಾಯ ಪಡೆಯಬಹುದಾಗಿತ್ತು. ಇದನ್ನು ಹೆಚ್ಚು ಮುಂದುವರಿಸುತ್ತಾ ಹೋದರೆ ಪ್ರತಿಪಕ್ಷದವರು ಸರ ಕಾರವನ್ನು ಟೀಕೆಮಾಡುವ ಉದ್ದೇಶದಿಂದ ಹೀಗೆ ಹೇಳುತ್ತಿದ್ದಾರೆ, ಅವರಿಗೆ ಬೇರೆ ಕೆಲಸವಿಲ್ಲ ಎಂದು ಭಾವಿಸುತ್ತಾರೆ. ಆದುದರಿಂದ ನಾನು ಹೆಚ್ಚಾಗಿ ಮಾತನಾಡುವುದಿಲ್ಲ. ನಾನು ಪ್ರಾರ್ಥನೆ ಮಾಡಿಕೊ ಳ್ಳುವುದಿಷ್ಟೆ: ಈಗ ಕೊಟ್ಟಿರುವ ನೆರವು ಸಾಲದು, ಕಷ್ಟನಷ್ಟಗಳಿಗೊಳಗಾಗಿರುವ ಜನರಿಗೆ ಹೆಚ್ಚು ಸಹಾಯ ನೀಡಬೇಕು, ಹೆಚ್ಚು ಹೆಚ್ಚಾಗಿ ಕೇಂದ್ರದ ಮೇಲೆ ಒತ್ತಾಯಮಾಡಿ ಹೆಚ್ಚು ನೆರವು ಪಡೆದು ಜನರ ಕಷ್ಟ ನೀಗಬೇಕು. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎ. ಆರ್. ನಾಯ್ಡು (ಉಪಾಧ್ಯಾಯರ ಕ್ಷೇತ್ರ).—ಸನ್ಮಾನ್ಯ ಸಭಾಪತಿಯವರೆ, ನಾನು ಈ ಸಂದರ್ಭದಲ್ಲಿ ಭಾಷಣ ಮಾಡಬೇಕೆಂದಿರಲಿಲ್ಲ. ಆದರೆ ನನ್ನ ಸಹೋದ್ಯೋಗಿಗಳಾದ ವಿರೋಧ ಪಕ್ಷದ ಸದ ಸ್ಯರು ಮಾತನಾಡಿದ್ದರ ಮೇಲೆ ಒಂದೆರಡು ನಿಮಿಷ ಮಾತನಾಡಬೇಕೆಂಬ ಅಭಿಲಾಷೆಯುಂಟಾಗಿದೆ. ಈಗ ಪ್ರವಾಹ ಬಂದು ಹಾನಿಯಾಗಿದೆ. ಅದಕ್ಕೆ ಪರಿಹಾರ ನೀಡಿ ಮುಂದೆ ಹಾನಿಯಾಗುವುದನ್ನು ತಡೆಗಟ್ಟಬೇಕಾ ಗಿದೆ. ಅನೇಕ ಸದಸ್ಯರು ಈ ವಿಷಯದಲ್ಲಿ ಈಗಾ ಗಲೆ ಮಾತನಾಡಿದ್ದಾರೆ. ಇತ್ತೀಚೆಗೆ ಅಸ್ಸಾಂ, ಬಂಗಾಳ ಮುಂತಾದ ಇತರ ಪ್ರಾಂತಗಳಲ್ಲೂ ಪ್ರವಾಹ ಬಂದು ಅನೇಕ ಕಷ್ಟನಷ್ಟಗಳುಂಟಾಗಿರುವು ದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ದೇಶದ ಬಹಳ ಜವಾಬ್ದಾರಿ ಸ್ಥಾನದಲ್ಲಿರುವ ಶ್ರೀ ಅಂಜನಪ್ಪನವರು ಪುಟ್ಟ ಭಾಷಣವನ್ನು ಮಾಡಿದರು. ಪ್ರಜಾಪ್ರಭುತ್ವ ದಲ್ಲಿ ಬಹಳ ಅನುಭವವಿರುವ ಹಿರಿಯ ಸದಸ್ಯರಾದ ಸರ್ವಶ್ರೀ ವೆಂಕಟಪ್ಪನವರು, ಕೆಂಪಹೊನ್ನಯ್ಯನವರು ಸಚಿವರು ಹೇಳುವ ಮಾತನ್ನು ನಾವು ಕೇಳಬೇಕಾಗಿದೆ. ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲೂ ನಮ್ಮಲ್ಲಿರುವಹಾಗೆ ವಿರೋಧ ಪಕ್ಷವಿದೆ. ಆ ಪಕ್ಷದವರು ಸತ್ಯಾಂಶ ಮಾತ್ರ ಹೇಳುತ್ತಾರೆ, ಸತ್ಯಾಂಶ ಯಾರೇ ಹೇಳಿದರೂ ಒಪ್ಪಿಕೊಳ್ಳುತ್ತಾರೆ. ಅದು ಮುಖ್ಯವಾದುದು. ಆ ಬಗ್ಗೆ ಹೆಚ್ಚಾಗಿ ಹೇಳುವುದಿಲ್ಲ.

ಈಗ ಮೊಟ್ಟಮೊದಲು ಮಹಾ ಜವಾಬ್ದಾರಿಯ ವಿಷ ಯವೊಂದನ್ನು ನಭೆಯ ಮುಂದೆ ಇಡುತ್ತೇನೆ. ಅದಕ್ಕೆ ಸನ್ಮಾನ್ಯ ಸಭಾಪತಿಯವರೂ ಮತ್ತು ಸನ್ಮಾನ್ಯ ಸಚಿವರೂ ಮನ್ನಣೆ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಅದೇನೆಂದರೆ ನಮಗೊದ ಗಿರವ ಕಷ್ಟ ಪರಿಹಾರಕ್ಕಾಗಿ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಸ್ಮರಿಸಬೇಕಾದ್ದು.

ಆ ಪರಮಾತ್ಮ, ವೆಂಕಟೇಶ್ವರನ ಅನುಗ್ರಹವಿಲ್ಲದೆ ಏನೂ ಆಗುವುದಿಲ್ಲ. ಅವನಿಗೊಂದು ನಹನ್ನು ಕಲಶಾಭಿಷೇಕ ಮಾಡಿಸಿದರೆ ಈಗ ಪ್ರವಾಹದಿಂದ ಏನೇನು ಆಗುತ್ತಿದೆಯೆಂದು ಹೇಳುತ್ತಿದ್ದೀರೋ ಅದೆಲ್ಲಾ ನಿಂತುಹೋಗುತ್ತದೆ.

ಶ್ರೀ ಟಿ. ಎಚ್. ಕೆಂಪಹೊನ್ನಯ್ಯ.—ಅದೆಲ್ಲಾ ನಿಂತು ಹೋದರೆ ಮತ್ತೆ ಕಷ್ಟ ಬರುತ್ತದೆ. ಮಳೆಯೇ ಬಾರದೆ ಇದ್ದರೆ ಆ ಮೇಲೆ ಏನು ಮಾಡುತ್ತೀರಿ?

ಶ್ರೀ ಬಿ. ಎ. ಅಂಜನಪ್ಪ.—ಈಗ ತಾವು ಹೇಳುವ ಅಭಿಷೇಕ ಪ್ರವಾಹ ಬರುವುದಕ್ಕೆ ಮುಂಚೆ ಮಾಡ ಬೇಕಾಗಿತ್ತು ಅಥವಾ ಈಗ ಮಾಡಬೇಕಾಗಿದೆಯೋ? ಈಗ ಮಾಡಬೇಕಾದ್ದನ್ನು ಹೇಳಿ.

ಶ್ರೀ ಎ. ಆರ್. ನಾಯ್ಡು.—ನಾನೀಗ ಏಕೆ ಹೇಳುತ್ತಿದ್ದೇನೆಂದರೆ, 1962ನೆಯ ಇಸವಿಯ ವರೆಗೂ ನಮಗೂ ನಿಮಗೂ ಈ ತೆರದ ಗಂಡಾಂತರ ತಪ್ಪಿದ್ದಲ್ಲ. ಯಾವಾಗ ದೇಶದಲ್ಲಿ ಕ್ರಮದಲ್ಲಿ ಅಕ್ರಮ, ನ್ಯಾಯದಲ್ಲಿ ಅನ್ಯಾಯ, ಧರ್ಮದಲ್ಲಿ ಅಧರ್ಮ, ಆಚಾರದಲ್ಲಿ ಅನಾಚಾರ, ವಿಧೇಯತೆಯಲ್ಲಿ ಅವಿಧೇಯತೆ, ನೀತಿ ಯಲ್ಲಿ ಅನೀತಿ ಹೆಚ್ಚಾದುವೋ, ಅದಕ್ಕೆ ಇಂಥ ಪ್ರವಾಹಗಳು ಬರುವುದು. ಈಗ ನಮ್ಮ ನಡೆ ನುಡಿ ಗಳಲ್ಲ ಸತ್ಯ ಧರ್ಮಗಳು ಮಾಯವಾಗುತ್ತಿವೆ. ಅದರಿಂದಲೇ ತಾನೇ ತಾನಾಗಿ ಬರುತ್ತದೆ ಪ್ರಳಯ! ಮೈನೂರು ದೇಶದಲ್ಲಿ ಪ್ರವಾಹದ ಅನಾಹುತ ವಾಯಿತೆಂದು ನಾವು ಕೇಳಿಯೇ ಇರಲಿಲ್ಲ. ಅಂಥಾದ್ದು ಈ ಹೊತ್ತು ಏಕೆ ಬಂತು? ಈ ಸಂದರ್ಭದಲ್ಲಿ ಒಂದಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸರ್ವೇ ಸಾಮಾನ್ಯವಾಗಿ ಶ್ರೀ ವೀರಣ್ಣಗೌಡರು ದ್ವೈಪ

(ಶ್ರೀ ಎ. ಆರ್. ನಾಯ್ಡು)

ಭಕ್ತರು. ಅಂಥ ದೈವಭಕ್ತರಾದ ವೀರಣ್ಣಗೌಡರಲ್ಲೂ ಅವರ ಭಕ್ತಿ, ಸ್ವಲ್ಪಮಟ್ಟಿಗೆ ಕಡಮೆಯಾಗಿದೆಯೆಂದರೆ ಏನೂ ತಪ್ಪಿಲ್ಲ. ಆದುದರಿಂದಲೇ ನಾನು ಸಹಸ್ರ ಕಲಶಾಭಿಷೇಕವನ್ನು ಮಾಡಿಸಬೇಕೆಂದು ಹೇಳುತ್ತಿರುವುದು. ಇಡಿಯ ಜಗತ್ತಿನಲ್ಲೇ ಒಂದೂವರೆ ಕೋಟಿ ರೂಪಾಯಿಗಳ ವರಮಾನವಿರುವ ದೇವಾಲಯ ಮತ್ತೊಂದಿಲ್ಲ; ಅಂಥ ಪ್ರಸಿದ್ಧವಾದ ದೇವರ ವಿಷಯದಲ್ಲಿ ನಾವು ಸ್ವಲ್ಪ ಔದಾಸೀನ್ಯ ತಾಳಿದರೂ ತೊಂದರೆಯಾಗುವುದು ಹೆಚ್ಚಲ್ಲ. ಹಿಂದಿನಿಂದಲೂ ಮೈಸೂರು ದೇಶದಲ್ಲಿ ಅನ್ನ ಸತ್ರಗಳಿದ್ದು ಬಡಬಗ್ಗರಿಗೆ ಅನ್ನದಾನ ಮಾಡುವ ಪದ್ಧತಿಯಿತ್ತು. ದೇಶದ ಶಾಂತಿಗಾಗಿ ಮಾಡುತ್ತಿದ್ದ ಈ ಸೇವೆಯನ್ನು ನೀವು ಇಂದು ನಿಲ್ಲಿಸಿಬಿಟ್ಟಿದ್ದೀರಿ. ನಾನು ಸಹಸ್ರಾಭಿಷೇಕ ಮಾಡಿಸಬೇಕೆಂದು ಹೇಳಿದ ವೆಂಕಟೇಶ್ವರನ ಮಹಾತ್ಮೆಯನ್ನು ಹೇಳಬೇಕಾಗಿಲ್ಲ. ಜಗತ್ತಿನ ಎಲ್ಲಾ ಕಡೆಯಿಂದಲೂ ದಕ್ಷಣ ಆಫ್ರಿಕದಿಂದಲೂ ಯಾತ್ರಿಕರು ಬಂದು ಪ್ರಪಂಚದಲ್ಲೇ ಇದು Living God ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಆ ಪರಮಾತ್ಮನಿಗೆ ನಾವು ನಮ್ಮ ಕಷ್ಟವನ್ನು ಹೇಳಿಕೊಳ್ಳದೆ ಹೋದರೆ ನಮಗೇನಾಗುತ್ತದೆ! ಈ ರೀತಿ ಸರ್ಕಾರ ತಪ್ಪು ಮಾಡಿದರೆ ತಪ್ಪು ಮಾಡಿದೆಯೆಂದು ನಾವೂ ಹೇಳುತ್ತೇವೆ. ಹೀಗೆ ಏನು ಮಾಡಬೇಕೆಂದು ಹೇಳದೆ, ಶ್ರೀ ಅಂಜನಪ್ಪ ನಂಥವರು ಸರ್ಕಾರದ ಟೀಕೆಯೇ ಮುಖ್ಯವೆಂದು ಭಾಷಣ ಮಾಡುತ್ತಾ ಹೋಗುವುದರಿಂದೇನು ಪ್ರಯೋಜನ? ಅಧಿಕಾರಿಗಳು ಕಾಪಿಬುಕ್ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. ಈ ಹೊತ್ತು ನಮ್ಮ ದೇಶದಲ್ಲಿ ಹುಟ್ಟಿದ ಸರ್ ಎಂ. ವಿಶ್ವೇಶ್ವರಯ್ಯನವರು ಏನು ಹೇಳಿದ್ದಾರೆ ನೋಡಿ. ಮೈಸೂರು ದೇಶದ ಎಂಜಿನಿಯರುಗಳ ಪಾತ್ರ ಮಹತ್ವದ್ದಾಗಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿರುವಷ್ಟಕ್ಕಿಂಥ ಎಂಜಿನಿಯರುಗಳು 18 ದಿವಸಗಳಲ್ಲಿ ಒಂದು ಸೇತುವೆಯನ್ನು ಕಟ್ಟಿದ್ದಾರೆಂದರೆ ನಮ್ಮ ಎಂಜಿನಿಯರುಗಳ ವಿಷಯದಲ್ಲಿ ನಾವು ಹೆಮ್ಮೆ ಪಡಬೇಕಾಗಿದೆ.

ಶ್ರೀ ಎಂ. ಪಿ. ಈಶ್ವರಪ್ಪ.—18ದಿವಸವಲ್ಲ, 24 ಗಂಟೆಯಲ್ಲಿ ಕಟ್ಟುವಷ್ಟಕಾಲ ಇದು. You are still in the bullock cart age.

ಶ್ರೀ ಎ. ಆರ್. ನಾಯ್ಡು.—ತುಂಬ ಸಂತೋಷ. ವಿರೋಧಪಕ್ಷದ ನಾಯಕರೆಂದು ತಮಗೆ ತುಂಬ ಗೌರವ ಕೊಡುತ್ತೇನೆ. ಇದು ಜೆಟ್ ಫ್ಲೇನಿನ ಕಾಲವೆಂದು ತಿಳಿಯಿತು. ಇಂಥ ಕಾಲದಲ್ಲೂ ಒಂದು ಸೇತುವೆಯನ್ನು ಕಟ್ಟಬೇಕಾದರೆ ಎಷ್ಟುಕಾಲ ಬೇಕು ನೀವೇ ಯೋಚನೆ ಮಾಡಿ. ನಮ್ಮ ಮೈಸೂರು ಎಂಜಿನಿಯರು 18 ದಿವಸಗಳಲ್ಲಿ ಕಟ್ಟಿದ್ದಾರೆಂದರೆ ಅವರ ಪಾತ್ರ ಪ್ರಶಂಸನೀಯವೇ. ಅವರು ದೇಹದ ಅಸಕ್ತಿಯನ್ನು ತ್ಯಾಗಮಾಡಿ ಕಟ್ಟಿರುವುದಕ್ಕೆ ಅವರಿಗೆ gold medal ಕೊಡಬೇಕೆನ್ನುವಾಗ ನೀವು ಟೀಕೆ ಮಾಡಿ 12ಗಂಟೆಯಲ್ಲಿ ಒಂದು ಸೇತುವೆಯನ್ನು ಕಟ್ಟಿದರೆ ಅದು ಒಂದೇ ಗಂಟೆಯಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ವಿರೋಧಪಕ್ಷದ ಇಂಥ ಟೀಕೆಗಳನ್ನು ನೋಡಿದರೆ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಊರಿನಲ್ಲಿ ಮಹಾಬೆಂಕಿ ಹತ್ತಿಕೊಂಡು ಗುಡಿಸಲುಗಳೆಲ್ಲಾ ಉರಿಯುತ್ತಿದ್ದುವಂತೆ.....

ಶ್ರೀ ಎಂ. ಪಿ. ಈಶ್ವರಪ್ಪ.—ಯಾರೂ ಏನೂ ಹೇಳದೆ ಇದ್ದುದಕ್ಕೆ ಮಾನ್ಯ ಸದಸ್ಯರು ಉತ್ತರ ಕೊಡುವುದಕ್ಕೆ ಹೋದ ಹಾಗೆ ಕಾಣುತ್ತದೆ. ಅಂಥ ಉತ್ತರ ಕೊಡುವುದೇನಿದ್ದರೂ ಮಾನ್ಯ ಮಂತ್ರಿಗಳಿದ್ದಾರೆ. ಮಾನ್ಯ ಸದಸ್ಯರು ಬೇಕಾದರೆ ಸಲಹೆ ಕೊಡಬಹುದು. ಅದನ್ನು ಬಿಟ್ಟು ವಿರೋಧಪಕ್ಷದ ಟೀಕೆಗೆ ಅದೂ ಗೂಹಾಪೋಹದ ಮೇಲೆ—ಉತ್ತರ ಕೊಡುವುದು ಸಮಂಜಸವಾಗಿ ಕಾಣುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಏನಾದರೂ ಸಲಹೆಗಳಿದ್ದರೆ ಕೊಡುವುದು ಉತ್ತಮ.

ಶ್ರೀ ಎ. ಆರ್. ನಾಯ್ಡು.—ನಾನೂ ತಾಪು ಮಾತನಾಡಿದ್ದನ್ನು ಕೇಳಿದ್ದೇನೆ. ಭಾಷಣ ಏನೇನಾಯಿತು, ಯಾರು ಏನೇನು ಹೇಳಿದರು ಎಂಬುದನ್ನು ನಾನೂ ಕೇಳುತ್ತಿದ್ದೇನೆ. ಅದನ್ನು ಕೇಳಿದ ಮೇಲೆ, ಅದಕ್ಕೆ ಉತ್ತರ ಸ್ವಲ್ಪ ಹೇಳದೆ ಹೋದರೆ ತಪ್ಪಾಗುತ್ತದೆ. ನಾನಾಗಲೇ ಹೇಳಿದಂತೆ ಇವರ ಟೀಕೆಗಳು ಹೇಗಿವೆಯೆಂದರೆ—ಒಂದು ಊರಿನಲ್ಲಿ ಉರಿಯುತ್ತಿರುವ ಬೆಂಕಿಯನ್ನು ಒಬ್ಬ ಮುದುಕ—80 ವರ್ಷದ ಮುದುಕ—ಆರಿಸಲು ಹೋಗಿ ಅವನ ದಾಡಿ ಹೊತ್ತಿಕೊಂಡು ಉರಿಯುತ್ತಿರುವಾಗ ನಿಮ್ಮಂಥವರು ಹೋಗಿ 'ಸ್ವಲ್ಪ ನಿಲ್ಲಪ್ಪಾ ಬೀಡಿ ಹೊತ್ತಿಸಿಕೊಳ್ಳುತ್ತೇನೆ' ಎಂದು ಹೇಳಿದರಂತೆ. ವಿರೋಧಪಕ್ಷದ ಟೀಕೆ ಹೀಗಿದೆ.

ವಿರೋಧ ಪಕ್ಷದವರ ಟೀಕೆಯ ಬಗ್ಗೆ ಇಷ್ಟು ಹೇಳಿ, ಇನ್ನು ಪ್ರವಾಹದ ವಿಷಯದಲ್ಲಿ ಈಗ ಏನು ಮಾಡಬೇಕೆಂಬ ವಿಷಯವನ್ನು ಮಾತ್ರ ತಮ್ಮ ಮುಂದಿಡುತ್ತೇನೆ. ಈಗಾಗಲೇ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಅವರು ಉತ್ತಮವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ನಾವೇನೂ ಅಮೆರಿಕಾ, ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿ ಯಾವ ರೀತಿ ಇದನ್ನು ತಡೆಗಟ್ಟುತ್ತಿದ್ದಾರೆಂಬುದನ್ನು ನೋಡಿಕೊಂಡು ಬರುವ ಅವಕಾಶ ಸಿಕ್ಕಿಲ್ಲ. ಅಲ್ಲಿ ಇಂಥ ಪ್ರವಾಹಗಳು ವರ್ಷಕ್ಕೊಮ್ಮೆ ಬರುತ್ತಿರುತ್ತವೆ. ಅವರು ಏನಾದರೂ ಮಾಡಿರುತ್ತಾರೆ. ಸಾಧ್ಯವಿದ್ದು ನಮಗೂ ಹಾಗೆ ನೋಡಿಕೊಂಡು ಬರುವುದಕ್ಕೆ ಅವಕಾಶವಿದ್ದರೆ ಒಳ್ಳೆಯದು. ಅಲ್ಲಿ ಪದೇಪದೇ ವರ್ಷಕ್ಕೆ ಒಂದು ಸಾರಿ ಪ್ರವಾಹ ಬಂದರೂ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿ ಜನತೆಗೂ ಸರ್ಕಾರಕ್ಕೂ ಹೆಚ್ಚಿಗೆ ತೊಂದರೆಯಾಗದಿರುವ ರೀತಿಯಲ್ಲಿ ಖಾಯಂ ಏರ್ಪಾಡುಗಳನ್ನು ಮಾಡಿದ್ದಾರೆ. ಅದ್ಯಷ್ಟದಿಂದಲೋ ಅಥವಾ ದುರಾದೃಷ್ಟದಿಂದಲೋ ನಾನು ಪಾಶ್ಚಾತ್ಯ ದೇಶಕ್ಕೆ ಹೋಗುವ ಸಂದರ್ಭ ಬೊರೆಯದೆ ಇದ್ದರೂ, ಪ್ರವಾಹ ಇತ್ತೀಚೆಗೆ ಏಕೆ ಹೆಚ್ಚಾಗುತ್ತಿದೆಯೆಂದು ಒಂದು ರೂಪಾಯಿ, ಎರಡು ರೂಪಾಯಿ ಖರ್ಚುಮಾಡಿ ಸಿನಿಮಾಕ್ಕೆ ಹೋಗಿ ನೋಡಿ ತಿಳಿದಿದ್ದೇನೆ. ಅದರ ಮೇಲೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ.—ಮೊನ್ನೆ ನಮ್ಮ ಸ್ನೇಹಿತರು ಹೇಳಿದರು, ನದಿಗಳ ಅಗಲ ಜಾಸ್ತಿಯಾಗಿದೆ, ನದಿಗಳನ್ನು ಆಳ ಮಾಡಬೇಕು ಎಂದು. ಇದು ನಿಜ. ಉದಾಹರಣೆಗೆ ತುಂಗಾನದಿ ಹುಟ್ಟುವ ಸ್ಥಳದಿಂದ ಸಾವಿರಾರು ಮೈಲಿ ದೂರ ಹೋಗುತ್ತಿಲ್ಲ. ನೂರು ಮೈಲಿ ಹೋಗಬಹುದು. ಬೆಂಗಳೂರಿನಲ್ಲಿ ಈಗ 5-10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಇಲ್ಲಿ ಬೀಳುವ ನೀರೆಲ್ಲಾ ಪೋರಿಯಲ್ಲಿ ಬಿದ್ದುಹೋಗುವಂತೆ ಮಾಡಿದ್ದೇವೆ. ಒಂದು ಸಲ ಮಾಡಿಸಿಬಿಟ್ಟರೇ ಆಯಿತು, ಮತ್ತೆ ಕಟ್ಟಬೇಕಾಗಿಲ್ಲ. ಅದೇ ರೀತಿ ಕೊಡಗಿನಲ್ಲಿ ಹುಟ್ಟುವ ಕಾವೇರಿ ನದಿಗೆ ನಮ್ಮ ಮೈಸೂರಿನ ಎಲ್ಲೆಯನ್ನು ಬಿಡುವವರೆಗೂ ಒಂದು ಕಾಲುವೆ ಮಾಡಿಸಿದರೆ ತಮ್ಮ ಕೆಲಸವನ್ನು ಜನತೆ ಮೆಚ್ಚುತ್ತದೆ. ಇದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯ

ಮಂತ್ರಿಗಳು ಮತ್ತು ನಮ್ಮ ಇಂಜಿನಿಯರುಗಳು ಗಮನಿಸುತ್ತಾರೆಂದು ನಂಬಿದ್ದೇನೆ.

ಇತ್ತೀಚೆಗೆ ಪ್ರವಾಹದಲ್ಲಿ ನೊಂದವರು ತಮ್ಮ ಹಳೆಯ ನೆಲೆಯನ್ನು ಬಿಟ್ಟು ಬೇರೆ ಸ್ಥಳಗಳಿಗೆ ಹೋಗುವುದಿಲ್ಲವೆಂದು ಹೇಳುತ್ತಾರೆಂದು ಕೆಲವರು ಹೇಳಿದರು. ಆದರೆ ಆ ಜನರನ್ನು ಒತ್ತಾಯ ಮಾಡಿ ಬೇರೆ ಸ್ಥಳಗಳಿಗೆ ಕಳುಹಿಸುವುದು ಒಳ್ಳೆಯದು. ಪ್ರವಾಹದಿಂದ ಜನರಿಗೆ ಎಷ್ಟು ತೊಂದರೆಯಾಯಿತೆಂದು. ನಾನು ಕಣ್ಣಾರೆ ಕಂಡಿದ್ದೇನೆ. ಮತ್ತೆ ಅವರನ್ನು ಆ ಸ್ಥಳದಲ್ಲೇ ಇಟ್ಟರೆ ಪುನಃ ತೊಂದರೆಯಾಗುತ್ತದೆ ಆದುದರಿಂದ ಜನರು ಬೇರೆ ಕಡೆಗಳಿಗೆ ಹೋಗಲು ಒತ್ತಾಯ ಮಾಡಿ ಕಳುಹಿಸುವ ಕಾರ್ಯದಲ್ಲಿ ನನ್ನ ನಹೋದ್ಯೋಗಿಗಳೂ ಜಿಲ್ಲಾಧಿಕಾರಿಗಳೂ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ, ವರದಾ ನದಿ ಮತ್ತು ಇತರ ನದಿಗಳಲ್ಲಿ ಪ್ರವಾಹ ಬಂದು ಜನರಿಗೆ ತೊಂದರೆಯಾಗಿದೆ. ಹಿಂದೆ ಬೆಂಗಳೂರಿನ ಜಿಲ್ಲಾಧಿಕಾರಿಗಳಾಗಿದ್ದವರು ಈಗ ಅಲ್ಲಿ ಜಿಲ್ಲಾಧಿಕಾರಿಗಳಾಗಿದ್ದಾರೆ. ಅವರು ಬಹಳ ಶ್ರಮ ಪಟ್ಟು ಅಲ್ಲಿ ಪ್ರಾಣಹಾನಿಯಾಗದೇಯಿರಲು ಸರ್ವ ಪ್ರಯತ್ನವನ್ನೂ ಮಾಡಿ ಜನರನ್ನು ಬದುಕಿಸಿದ್ದಾರೆ, ಅದಕ್ಕಾಗಿ ಅವರಿಗೆ ಕೃತಜ್ಞತೆಯನ್ನರ್ಪಿಸುತ್ತೇನೆ.

ಎರಡನೆಯದಾಗಿ ಇಂಡಿಯಾ ಸರ್ಕಾರದವರು ಸಹಾಯ ಮಾಡಬೇಕೆಂದು ಕೇಳಿದ್ದಾರೆ, ನಮ್ಮ ಸ್ನೇಹಿತರನೇಕರು ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಶ್ರೀಮಾನ್ ಸುಬ್ಬಣ್ಣನವರು ಹೇಳಿದ ಹಾಗೆ, ನಮ್ಮ ದೇಶದಲ್ಲಿ ಅನೇಕ ದಾನಿಗಳಿದ್ದಾರೆ. ಇದಕ್ಕೆ ನೆನ್ನೆಯದಿನ ದಾನ ನೀಡಿದ ಶ್ರೀ ಮಾರ್ ಕೆಂಪ ಹೊನ್ನಯ್ಯನವರೇ ನಿದರ್ಶನ. ಅವರು ಹೇಳಿದಂತೆ ಇದುವರೆಗೆ ಪ್ರವಾಹ ನಿವಾರಣೆಗೆ ಎಷ್ಟು ದಾನ ಮಾಡಿದ್ದಾರೋ ಇದರ ಹತ್ತರಷ್ಟು ಕೊಡುವ ದಾನಿಗಳಿದ್ದಾರೆ. ನಮ್ಮ ದೇಶದಲ್ಲಿ ಒಟ್ಟಿನಲ್ಲಿ ಇನ್ನು ಮುಂದೆ ಈ ರೀತಿ ಪ್ರವಾಹದಿಂದ ಅನಾಹುತವಾಗದೇಯಿರುವ ರೀತಿ ಏರ್ಪಾಡನ್ನು ಸರ್ಕಾರ ಮಾಡಬೇಕು.

ಕೋಲಾರದಲ್ಲಿ ಮಳೆಯೇ ಇಲ್ಲ. ಇತರ ಕಡೆಗಳಲ್ಲಿ ಪ್ರವಾಹದಿಂದ ಜನರು ಎಷ್ಟು ಕಷ್ಟಪಟ್ಟಿದ್ದಾರೋ ಅಷ್ಟೇ ಕಷ್ಟವನ್ನು ಕೋಲಾರದ ಜನರು ಮಳೆಯಿಲ್ಲದೆ ಪಡುತ್ತಿದ್ದಾರೆ. ಅಲ್ಲಿ ಬಾವಿಗಳನ್ನು ಮಾಡಿಸಿ ನೀರಿನ ಸೌಕರ್ಯ ಮಾಡಬೇಕು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಭೂಮಿ ಕುಸಿದಿದೆಯೆಂದು ಹೇಳಿದರು. ಕೋಲಾರ ಚಿನ್ನದ ಗಣಿಯಲ್ಲಿ ಎರಡು ಸಾವಿರ ಅಡಿಯಿಂದ ಆರು ಸಾವಿರ ಅಡಿ, ಎಂಟು ಸಾವಿರ ಅಡಿ ಆಳ ಕೊರೆದು ಮೈಲಿಗಟ್ಟಲೆ ಬಂಗಾರ ತೆಗೆಯಲು ಕೊರೆದಿದ್ದಾರೆ. ಈಗಲೂ ಈ ಕಾರ್ಯ ನಡೆಯುತ್ತಿದೆ. ಹೀಗೆಯೇ ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿನ್ನದ ಗಣಿ ಇತ್ತೋ ಏನೋ ಇದರಿಂದ ಹೀಗಾಗುತ್ತಿದೆಯೋ ಏನೋ ಎನಿಸುತ್ತದೆ. ನಮ್ಮ ದೇಶದಲ್ಲಿ ಉತ್ತಮ ಇಂಜಿನಿಯರುಗಳಿದ್ದಾರೆ, ಅವರನ್ನು ಕೇಳಿ ಬೇಕು. 1962ನೆಯ ಇಸವಿಯಲ್ಲಿ ಇದಕ್ಕಿಂತಲೂ ಜಾಸ್ತಿ ಮಳೆ ಪ್ರವಾಹ ಬರುತ್ತದೆ, ಅದಕ್ಕೇನು ಹೇಳುತ್ತಾರೆಂದು ತಿಳಿಯಬೇಕು. ಶ್ರೀ ಈಶ್ವರಪ್ಪ ನವರೂ, ಶ್ರೀಮಾನ್ ಅಂಜನಪ್ಪನವರೂ ಇದಕ್ಕೇನಾದರೂ ಸಲಹೆ ಕೊಡಲಿ.

ಇಲ್ಲಿ ನಾನು ದೀರ್ಘವಾಗಿ ಭಾಷಣ ಮಾಡಬೇಕಾದ ಅಗತ್ಯವೇನೂ ಇಲ್ಲ. ಜನರು ಬಹಳ ಕಷ್ಟಪಡುತ್ತಿದ್ದಾರೆ. ಕೊನೆಯದಾಗಿ ಒಂದು ವಿಚಾರವನ್ನು ಹೇಳುತ್ತೇನೆ. ಪ್ರಳಯವಾಗಿದೆ ಧರ್ಮ ಮಾಡಿ, ಸಹಾಯ ಮಾಡಿ ಎಂದು ಕೇಳುತ್ತಾರೆ. ಹಿಂದೆ ಅನ್ಯಾಯಿಗೆ ಸಹಾಯವಾಗಿ ಬೇಕಾದಷ್ಟು ಬಟ್ಟೆ ಬರೆಗಳನ್ನು ಕಳುಹಿಸಿದುದು ಮಾಯವಾಯಿತೆಂದು ಶ್ರೀಮತಿ ಲಕ್ಷ್ಮಮ್ಮ ನವರು ಹೇಳಿದರು. ಅದೇ ರೀತಿ ಶೇಖರಣೆ ಮಾಡುವ ಧನ ಮತ್ತು ಇತರ ಸಹಾಯ ಮಾಯವಾಗಬಾರದು ಈ ಸಹಾಯ ಯಾರಿಗೆ ಹೋಗಬೇಕೋ ಅವರಿಗೆ ಹೋಗಬೇಕು. ಅನೇಕರು ಬಾವಿ ತೋಡಿಸುತ್ತೇವೆಂದು ಹೇಳಿ ಬೇರೆ ಕಾರ್ಯಗಳಿಗೆ ಉಪಯೋಗಿಸುತ್ತಾರೆ. ಹಾಗಾಗಬಾರದು. ಕಾನೂನುಗಳನ್ನು ಸ್ವಲ್ಪ ನಡಿಲಪಾದರೂ ಮಾಡಿ, ಸರ್ಕಾರ ಮತ್ತು ಸಾರ್ವಜನಿಕರು ನೀಡುವ ಸಹಾಯ ಸರಿಯಾದವರಿಗೆ ತಲಪಬೇಕು. ಚೀಫ್ ಇಂಜಿನಿಯರು, ಡೆಪ್ಯುಟಿ ಕಮೀಷನರು ನಿಂತು ಯಾರು ತೊಂದರೆಗೊಳಗಾಗಿರೋ ಅವರಿಗೆ ಸಹಾಯ ಕೊಡಬೇಕು, ಕಷ್ಟಕ್ಕೊಳಗಾದ ನಮ್ಮ ಜನರಿಗೆ ಸರ್ಕಾರ ಮತ್ತು ನಮ್ಮ ಜನ ಆದಷ್ಟು ಜಾಗ್ರತೆ ಪರಿಹಾರ ಕೊಡಬೇಕು. ಈ ಹೊತ್ತು ಈ ಅಧಿವೇಶನ ಮುಕ್ತಾಯವಾಯಿತೆಂದು ಕಾಣುತ್ತದೆ, ಕಾರವಾರ ಮತ್ತು ಇತರ ಕೆಲವು ಕಡೆಗಳಲ್ಲಿ ಬಹಳ ತೊಂದರೆಯಾಗಿದೆಯೆಂದು ಡಾ॥ ಚಂಪಾ ಅವರು ಹೇಳಿದರು. ಆ ಪ್ರದೇಶದ ಜನರಿಗೆ ಕೊಟ್ಟ ಹಣ ಬೇರೆಯವರಿಂದ ದುರುಪಯೋಗವಾಗದೆ ಪ್ರವಾಹ ಪೀಡಿತರಿಗೇ ಸೇರುವಂತೆ ಏರ್ಪಾಡು ಮಾಡಬೇಕು. ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

*ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ ವಿಧಾನ ಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೆ, ಕೊಳ್ಳೆಗಾಲ ತಾಲ್ಲೂಕು ಇದೇ ತಿಂಗಳ ನಾಲ್ಕನೆಯ ತಾರೀಖಿನಿಂದೀಚೆಗೆ ಪ್ರಕೃತಿಯ ಪ್ರಕೋಪಕ್ಕೊಳಗಾಗಿ ನಮ್ಮ ಮೈಸೂರು ಜಿಲ್ಲೆಯಲ್ಲೆ ಅತಿ ಹೆಚ್ಚಿನ ಕಷ್ಟಕ್ಕೀಡಾದ ಒಂದು ಪ್ರದೇಶವಾಗಿದೆ. ಅಲ್ಲಿ ಪ್ರವಾಹ ಹೆಚ್ಚಾಗಿ ಬರಲು ಕಾರಣ, ಮೇ 22ನೇಯ ತಾರೀಖಿನಿಂದ ಕೊಡಗು ಹೆಗ್ಗಡದೇವನ ಕೋಟೆ ಮುಂತಾದ ಕಡೆ ಅತಿ ಹೆಚ್ಚು ಮಳೆಯಾಗಿ ಕಾವೇರಿ, ಕಪಿಲಾ ನದಿಗಳಲ್ಲಿ ಪ್ರವಾಹ ಹೆಚ್ಚಿ ತಿರುಮಕೂಡಲು ನರಸೀಪುರದ ಸಂಗಮದಲ್ಲಿ ಒಂದುಗೂಡಿ, ಈಚೆಗೆ 18 ಮೈಲಿ ದೂರದಲ್ಲಿ ನದಿಗೆ ಹತ್ತಿರವಿರುವ ಸುಮಾರು ಏಳೆಂಟು ಗ್ರಾಮಗಳ ದುರಂತ ಕಥೆಯನ್ನು ತಿಳಿಸಲಿಚ್ಛಿಸುತ್ತೇನೆ. ಜುಲೈ ನಾಲ್ಕನೆಯ ತಾರೀಖು ಸಾಯಂಕಾಲ ಸುಮಾರು ನಾಲ್ಕು ಗಂಟೆಯಲ್ಲಿ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಪೋಲೀಸ್ ಮತ್ತು ಇತರ ಅಧಿಕಾರಿಗಳಿಗೆ ಬಂದ ವರದಿಯ ಪ್ರಕಾರ ಅತಿ ಹೆಚ್ಚಿನ ಮಳೆಯಿಂದ, ಕೃಷ್ಣರಾಜ ಸಾಗರದಿಂದ ಹೆಚ್ಚು ನೀರನ್ನು ಬಿಡಲಾಗುತ್ತದೆಯಾದುದರಿಂದ ನದಿಯ ದಡದಲ್ಲಿರುವ ಜನರಿಗೆ ಮುನ್ನೆಚ್ಚರಿಕೆ ಕೊಡಬೇಕೆಂದು ತಿಳಿಸಿದ ಮೇಲೆ, ಕೊಳ್ಳೆಗಾಲದ ತಾಲ್ಲೂಕು ಮುಳ್ಳೂರು, ಹಂಪಾಪುರ, ದಾನಪುರ, ಅಣಗಳ್ಳಿ, ನದಿಯ ಮಧ್ಯೇ ದ್ವೀಪದಂತಿರುವ ಎಟಕುಯ್ಯ ಈ ಸ್ಥಳಗಳಿಗೆ ರೆವಿನ್ಯೂ ಮತ್ತು ಪೋಲೀಸ್ ಅಧಿಕಾರಿಗಳು ನಾಲ್ಕನೆಯ ತಾರೀಖು ಸಂಜೆ ಹೋಗಿ, ಜನರನ್ನು ಹೊರಗೆ ಬರುವಂತೆ ಬೇಡಿಕೊಂಡರು. ಆದರೆ ಅಲ್ಲಿನ ಜನ, ಪ್ರತಿ ವರ್ಷವೂ ಪ್ರವಾಹ ಬರುತ್ತದೆ, ಅದೇನೂ ವಿಶೇಷವಲ್ಲ ಆದಕ್ಕೆ ಹೆಚ್ಚು ಗಮನ ಕೊಡಬೇಕಾಗಿಲ್ಲವೆಂದು ಸ್ವಲ್ಪ ಮೈಮರೆತು, ಅನೇಕ ಜನ ಹೊರಗೆ ಬರಲಿಲ್ಲ. ನಾಲ್ಕನೆಯ ತಾರೀಖು ರಾತ್ರಿ ಹೆಚ್ಚು ಪ್ರವಾಹ ಬಂದ ಕಾರಣ ನದಿಯಲ್ಲಿ ನೀರಿನ ಮಟ್ಟ ಹತ್ತು ಹದಿನೈದು ಅಡಿ ಹೆಚ್ಚಿ ಮುಳ್ಳೂರು, ಹಂಪಾಪುರ, ದಾನನಪುರ ಗ್ರಾಮಗಳು ನೀರಿನಿಂದಾವೃತವಾದುವು. ನಾಲ್ಕನೆಯ ತಾರೀಖಿನಿಂದ ಆರನೆಯ ತಾರೀಖಿನವರೆಗೆ ರೆವೆನ್ಯೂ ಅಧಿಕಾರಿಗಳೂ, ಪೋಲೀಸ್ ಅಧಿಕಾರಿಗಳು

(ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ)

ಶ್ರೀಮಾನ್ ಜಿ. ವೆಂಕಟೇ ಗೌಡರ ನಾಯಕತ್ವದಲ್ಲಿ Flood Relief Committee ಮಾಡಿಕೊಂಡು, ಅಲ್ಲಿನ ಮಾಸಣ್ಣ ಶೆಟ್ಟರು, ಅರ್ಧನಾರೀಶ್ವರಗೌಡರು, ಮಲ್ಲಿಕಾರ್ಜುನ ಗೌಡರು, ಬೆಲ್ಲದ ಕೊಪ್ಪರಿಗೆಗಳನ್ನು ಉಪಯೋಗಿಸಿಕೊಂಡು ಜನರನ್ನು ರಕ್ಷಿಸಬೇಕಾಯಿತು. ಮುಳ್ಳೂರು ಗ್ರಾಮದ ಬೀದಿಯಲ್ಲಿ ಎದೆ ಮಟ್ಟದಷ್ಟು ನೀರು ನಿಂತಿತ್ತು. ಏಳುವರೆ ಎಂಟು ಗಂಟೆ ಸಮಯದಲ್ಲಿ ಅದರ ಮೇಲೆ ಹೋಗಬೇಕಾಯಿತು. ಅಲ್ಲಿನ ಜನರನ್ನು ಹೊರಗೆ ತರಬೇಕಾದರೆ ಅರ್ಧ ರಾತ್ರಿಯಮೇಲಾಯಿತು. ಆ ಹಳ್ಳಿಯ ಸುಮಾರು 700-800 ಜನರನ್ನು ಊರಿನಿಂದ ಹೊರಗೆ ತರಬೇಕಾದರೆ ಬಹಳ ಪ್ರಯಾಸದ ಕೆಲಸ. ದಾಸನಪುರ ನೀರಿನ ಅಡಿಯಲ್ಲಿತ್ತು.

ದಾಸನಪುರದಲ್ಲೂ ಸಹ ಹೊರಗಡೆಗೆ ಕರೆದು ಕೊಂಡು ಬಂದದ್ದಾಯಿತು. ದಾಸನಪುರ ಗ್ರಾಮಕ್ಕೆ ನಮ್ಮ ನಾಯಕರಾದ ಶ್ರೀಮಾನ್ ವೀರಣ್ಣಗೌಡರೂ ಸಹ ಬಂದಿದ್ದರು. ಸುಮಾರು 2-3 ಮನೆಗಳ ಏನಾ ಬಾಕಿ ಎಲ್ಲಾ ಮನೆಗಳೂ ಸರ್ವ ನಾಶವಾಗಿವೆ ಮತ್ತು ಅಣಗಳ್ಳಿ ಕೂಡ ನೀರಿನಲ್ಲಿ ಮುಳುಗಡೆಯಾಗಿದೆ. ಆ ಊರಿನಲ್ಲೂ ಸಹ ಅನೇಕ ಮನೆಗಳವರೂ ಹೊರಗಡೆ ಬಂದಿದ್ದಾರೆ. ಈ ರೀತಿ 4 ರಿಂದ 6ರ ವರೆಗೂ ಈ 4 ಗ್ರಾಮಗಳ ಸುಮಾರು 5-6 ಸಾವಿರ ಜನಗಳಿಗೆ ತಮ್ಮ ಮನೆಗಳಿಂದ ಹೊರಗಡೆಗೆ ಬರುವ ಏರ್ಪಾಡನ್ನು ಮಾಡಿ, ಅವರೆಲ್ಲರಿಗೂ ಸಹ, ಮುಕ್ಕಾಲು ಭಾಗದ ಜನರನ್ನು ಕೊಳ್ಳೇಗಾಲದಲ್ಲಿ ಎಲಿಮೆಂಟರಿ ಸ್ಕೂಲಿಗೆ ರಜಾ ಕೊಡಿಸಿ, ಎರಡು ಮೂರು ದಿವಸ ಶಾಲೆ ಮುಚ್ಚಿಸಿ ವಸತಿ ಸೌಕರ್ಯ ಏರ್ಪಡಿಸಲಾಯಿತು. ಇದೇ ರೀತಿ ದ್ವೀಪದ ವಾದ ಎಡಕುರ್ಯ ಗ್ರಾಮಕ್ಕೆ 4ನೇ ತಾರೀಖಿನ ದಿನ ಅಧಿಕಾರಿ ವರ್ಗದವರು ಎಚ್ಚರಿಕೆ ಕೊಟ್ಟರು. 1924ನೆಯ ಇಸವಿಯಲ್ಲಿ ಇದೇ ರೀತಿ ಪ್ರವಾಹ ಬಂದಿದ್ದಾಗಲೂ ಸಹ ಆಗಲೂ ಮಾದ ಮೇಲೆ ಇದ್ದು ರೂಢಿ ಆಗಿದ್ದವರಿಗೆ ತಿಳಿದಿರುವಂತೆ ಒಂದು ದಿವಸ ಮಾತ್ರ ಪ್ರವಾಹ ಬಂದು ಹೊರಟು ಹೋಗುತ್ತದೆ ಎಂಬ ಅವರ ಒಂದು ಅನುಭವದಿಂದ ಅವರು ಯಾವಾಗಲೂ ಸಹ ಯಾರ ಮಾತಿಗೂ ಒಪ್ಪದೇ ಅದೇ ದ್ವೀಪದಲ್ಲಿ ವಾಸವಾಗಿದ್ದರು. ಆದರೆ ಈ ಸಲದ್ದು ಪ್ರತಿ ಸಲ ಬರುತ್ತಾ ಇದ್ದಂಥ ಪ್ರವಾಹ ಅಲ್ಲ. ಸುಮಾರು ಒಂದು ವಾರ ಆ ಊರನ್ನು ಸಂಪೂರ್ಣವಾಗಿ ಸುತ್ತುಗಟ್ಟಿರುವುದೂ ಅಲ್ಲದೆ ಆ ಊರಿನಲ್ಲಿ ಸಮಾರು 400 ಎಕರೆಯಿಂದ 500 ಎಕರೆಯವರೆಗೂ ಇರತಕ್ಕ ಜಮೀನಿನಲ್ಲಿ ಪೂರ ಬಂದು ಆಳು ಉದ್ದದವರೆಗೂ ನೀರು ತುಂಬಿ ಹರಿಯುತ್ತಾ ಇದ್ದುದರಿಂದ ಯಾವ ವಿಧವಾದ ದೋಣಿ, ತೆಪ್ಪ ಯಾವುದನ್ನೂ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ 4ನೆಯ ತಾರೀಖು ಆದನಂತರ 5 ರಿಂದ 9ರ ವರೆಗೂ 5-6 ದಿವಸ ದೋಣಿ ಆಗಲಿ, ಯಾವುದೂ ಸಹ ಹೋಗುವುದಕ್ಕೆ ಆಗಲಿಲ್ಲ. ಆ ನದಿಯ ಪ್ರವಾಹ ಅಷ್ಟು ವೇಗವಾಗಿ ಅಲ್ಲ ಹರಿಯುತ್ತಾ ಇತ್ತು. ಕಾವೇರಿ, ಕಪಿಲಾ ನದಿ, ಈ ಎರಡರ ಪ್ರವಾಹ ಟಿ-ನರಸೀಪುರದಿಂದ ಆಚೆಗೆ ಬರುವುದರಿಂದ ಎಷ್ಟು ವೇಗದಿಂದ ಬರುತ್ತದೆ ಎಂಬುದನ್ನು ತಾವು ಊಹೆ ಮಾಡಿಕೊಳ್ಳಬಹುದು. ಅಕಸ್ಮಾತ್ ಯಾರಾದರೂ ಬಂದು ದೋಣಿಯಲ್ಲಿ ಅಲ್ಲಿಗೆ ಹೋಗಲು ಪ್ರಯತ್ನ ಪಟ್ಟದ್ದೇ ಆದರೆ ಒಂದು ಅಥವಾ ಎರಡು ಮೈಲಿ ಆಚೆಗೆ ಇರುವ ಗಗನ ಚುಕ್ಕಿ ಭರ ಚುಕ್ಕಿ ಪ್ರಪಾತ ಏನಿದೆ ಅಲ್ಲಿ ಹೋಗಿ ಬೀಳಬೇಕಾಗುತ್ತಿತ್ತು. ಇಂಥ ಒಂದು ಕಷ್ಟದಲ್ಲಿ ಎಡಕುರ್ಯದ 48 ಸಂಸಾರಗಳವರು ಸಿಕ್ಕಿ ಬಿದ್ದಿದ್ದರು. ದೈವದತ್ತವಾಗಿ ಇದ್ದಂಥ ಅತಿ ಎತ್ತರವಾದ 4-5 ಮರಗಳ ಮೇಲೆ ಕಾಡಿನಲ್ಲಿರುವ ಸೋಲಿಗರು ವಾಸ ಮಾಡುವಂಥ ಅಟ್ಟಣಿಗಳನ್ನು ಕಟ್ಟಿಕೊಂಡು ಸುಮಾರು 250 ಜನರು ಅಟ್ಟಣಿಗಳ ಮೇಲೆ 5 ದಿನಗಳ ಕಾಲ, ಕುಡಿಯುವುದಕ್ಕೆ ನೀರು ಸಹ ಇಲ್ಲದೆ ಹಸಿದು ವಾಸವಾಗಿದ್ದರು. ಅದನ್ನು ನೆನಸಿಕೊಂಡರೆ ನಿಜವಾಗಿಯೂ ಬಹಳ ವ್ಯಸನಕರವಾದ ವಿಷಯ. ಏಕೆಂದರೆ ಈಚೆ ದಡದಲ್ಲಿ ನಿಂತುಕೊಂಡು ಅವರ ನಿಸ್ಸಾಹಾಯಕತೆಯನ್ನು ನೋಡಿದ್ದೇ ಆದರೆ ಎಂತಹವರಿಗೂ ಮನಸ್ಸು ಕರಗಿಸುವಂಥ ವಿಷಯ. ಆ ಕಡೆಯಿಂದ 'ಏನಾದರೂ ಸಹಾಯ ಮಾಡಿ' ಎಂದು ಕೂಗಿಕೊಂಡ ದೃಶ್ಯ ಇವೊತ್ತು ನೆನಸಿಕೊಳ್ಳುವುದಕ್ಕೆ ಬಹಳ ಕಷ್ಟವಾದದ್ದು. ಯಾವ ವಿಧವಾದ ಸಹಾಯವನ್ನೂ ಅವರಿಗೆ 5 ದಿವಸಗಳ ತನಕ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇನ್ನೊಂದು ವಿಷಯವೇನೆಂದರೆ ಆ ಸಮಯದಲ್ಲಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ವಿಜೆಂಟರುಗಳು ಬದಲಾವಣೆ ಆದದ್ದರಿಂದ ಒಂದು ವಿಷಯವೂ ಸರಿಯಾಗಿ, ಸಕಾಲದಲ್ಲಿ ಪತ್ರಿಕೆಗಳಲ್ಲೂ ಸಹ ಬರುವುದಕ್ಕೆ ಸಾಧ್ಯವಾಗಲಿಲ್ಲ. 9ನೆಯ ತಾರೀಖು ಪ್ರವಾಹ ಅತಿ ಹೆಚ್ಚಾಗಿತ್ತು. ವೆಂಕಟೇ ಗೌಡರು, ಅರ್ಧನಾರೀಶ್ವರಗೌಡರು ಮತ್ತು ಇನ್ನಿಬ್ಬರು, ಧೈರ್ಯ ಸಾಹಸ ಮಾಡಿ ನದಿಯ ಪ್ರವಾಹ ಕೊಂಚ ಕಡಮೆಯಾದ ಮೇಲೆ ಅವರ ಗೋಳನ್ನು ನೋಡದಾರದೆ ಬೇರೆ ಕಡೆಯಿಂದ ಒಂದು ದೋಣಿಯಲ್ಲಿ ಹೋಗಿ ರೊಟ್ಟಿ ಮತ್ತು ಇತರ ಪದಾರ್ಥಗಳನ್ನು ಕೊಟ್ಟದ್ದೂ ಅಲ್ಲದೆ ಸುಮಾರು ಅರ್ಧರಾತ್ರಿಯ ವರೆಗೂ ಅಲ್ಲಿನ ಜನಗಳನ್ನು ಅಲ್ಲಿಂದ ಹೊರಕ್ಕೆ ಸಾಗಿಸಿದರು. 9ನೆಯ ತಾರೀಖಿನ ರಾತ್ರಿಯಿಂದ 10ನೇ ತಾರೀಖಿನವರೆಗೂ ಸಾಹಸ ಪಟ್ಟರು.

ಬೆಂಗಳೂರಿಗೆ ಬರಬೇಕಾದರೆ ಈ ನದಿಯ ಮೇಲೆ ಇರುವ ದೊಡ್ಡ ಸೇತುವೆ ಮುಳುಗಿಹೋಗಿ ಸುಮಾರು 6ನೆಯ ತಾರೀಖಿನಿಂದ 10ನೆಯ ತಾರೀಖಿನವರೆಗೂ ಯಾವ ವಿಧವಾದ ಬಸ್ಸುಗಳನ್ನಾಗಲೀ, ವಾಹನಗಳನ್ನಾಗಲೀ ಸೇತುವೆಯಮೇಲೆ ಬಿಡುತ್ತಾ ಇರಲಿಲ್ಲ. ಎಂದಮೇಲೆ 10ನೆಯ ತಾರೀಖೂ ಸಹ ಪ್ರವಾಹ ಇದ್ದೇ ಇತ್ತು. 9ನೆಯ ತಾರೀಖು ಬಹಳ ಧೈರ್ಯ ಮಾಡಿದ್ದರಿಂದ ಆ ಜನಗಳಿಗೆ 5 ದಿನಗಳನಂತರ ಊಟ ಮತ್ತು ಇತರಸೌಲಭ್ಯ ದೊರಕಿತು ಎಂದು ಹೇಳಲಿಚ್ಛಿಸುತ್ತೇನೆ.

ಮತ್ತು ನಮ್ಮ ತಾಲ್ಲೂಕಿನಲ್ಲಿ ಆದ ನಷ್ಟದ ವಿವರವನ್ನು ಸ್ವಲ್ಪ ನಾನು ತಿಳಿಸಲಿಚ್ಛಿಸುತ್ತೇನೆ. ಆ 5 ಗ್ರಾಮಗಳಲ್ಲಿ ಒಟ್ಟು ಸಂಪೂರ್ಣವಾಗಿ ನಾಶವಾದ ಮನೆಗಳ ವಿವರ ಈ ರೀತಿ ಇದೆ :—

ಮುಳ್ಳೂರು ಗ್ರಾಮದಲ್ಲಿ 90 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. 10 ಸಾವಿರ ರೂಪಾಯಿ ಬೆಳೆ ನಾಶವಾಗಿದೆ ಎಂದು ಅಂದಾಜು ಮಾಡಿದ್ದಾರೆ. 167 ಮನೆಗಳು ಅರ್ಧ ಅಥವಾ ಮುಕ್ಕಾಲು ಭಾಗ ಹೋಗಿ ಬರಿಯ ಗಾವಣಿಮಾತ್ರ ನಿಂತಿದೆ. ಹಂಪಾಪುರದಲ್ಲಿ 47 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. 89 ಮನೆಗಳು ಅರ್ಧಮರ್ಧ ಬಿದ್ದಿವೆ. ದಾಸನಹಳ್ಳಿಯಲ್ಲಿ 35 ಮನೆಗಳು ನಾಶವಾಗಿವೆ, 46 ಮನೆಗಳಿಗೆ ಅನೇಕ ವಿಧವಾದ ನಷ್ಟ ತಗಲಿದೆ. ಅಣಗಳ್ಳಿಯಲ್ಲಿ 18 ಮನೆಗಳು ನಾಶವಾಗಿವೆ, 62 ಮನೆಗಳು ಅರ್ಧಮರ್ಧ ಹಾಳಾಗಿವೆ. ಕೊಳ್ಳೇಗಾಲ ಟೌನ್‌ನಲ್ಲಿ ಸುಮಾರು. ಕಾವೇರಿ ನದಿಗೆ 1½ ಮೈಲಿ ದೂರದಲ್ಲಿದ್ದರೂ ಸಹ ಕೊಳ್ಳೇಗಾಲದ

ಎಕ್ಸಟೆರ್ಷ್ ಎಲ್ಲಾ ಮತ್ತು ಉಪ್ಪಾರಗೇರಿಯಲ್ಲಿ ಏದೆಮಟ್ಟ ನೀರು ನಿಂತಿದ್ದರಿಂದ 4 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. 103 ಮನೆಗಳಿಗೆ ಅರ್ಧಮರ್ಧ ಡ್ಯಾಮೇಜ್ ಆಗಿದೆ. ಎಡಕುರ್ಯ ಗ್ರಾಮದಲ್ಲಿ 11 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. 18 ಮನೆಗಳಿಗೆ ಧಕ್ಕೆತಗಲಿದೆ, ಅನೇಕ ವಿಧವಾದ ದುರವಸ್ಥೆಯಲ್ಲಿವೆ. ಎಂದಮೇಲೆ ನಮ್ಮ ತಾಲ್ಲೂಕಿನಲ್ಲಿ 690 ಮನೆಗಳು ಸಂಪೂರ್ಣವಾಗಿ ನಾಶವಾಗಿ ಅದರ ಒಟ್ಟು ನಷ್ಟ 45 ಸಾವಿರ ರೂಪಾಯಿಗಳಿಂದ 50 ಸಾವಿರ ರೂಪಾಯಿಗಳವರೆಗೂ ಆಗಿದೆ ಎಂದು ಅಧಿಕೃತವಾಗಿ ನಮಗೆ ತಿಳಿದುಬಂದಿದೆ. ಸುಮಾರು 326 ಎಕರೆ ಜಮೀನಿನಲ್ಲಿ ರಾಗಿ ಬೆಳೆಗೆ ನಷ್ಟವಾಗಿದೆ. ಸುಮಾರು 200 ಎಕರೆ ಜಮೀನಿನಲ್ಲಿ ಜೋಳದ ಬೆಳೆಗೆ ನಷ್ಟವಾಗಿದೆ. ಬತ್ತದ ನಾಟಿ ಹಾಕಿದ್ದ ಭೂಮಿ ಸುಮಾರು 325 ಎಕರೆಯಷ್ಟು ನಷ್ಟವಾಗಿದೆ. ಬತ್ತದ ಭೂಮಿಯಲ್ಲಿ ಒಂದು ಅತಿ ದೊಡ್ಡ ನಷ್ಟವಾಗಿರುವ ಹಳ್ಳಿ ಸತ್ಯೇಗಾರ ಅಗ್ರಹಾರ. ಅಲ್ಲಿ ಎರಡು ವಿಧದ ನಷ್ಟವಾಗಿದೆ. ಒಂದು ಹೇರಳವಾಗಿ ಮರಳನ್ನು ತಂದು ಸುಮಾರು ಒಂದು ಆಳು ಉದ್ದದ ಪ್ರಮಾಣದಷ್ಟು 106 ಎಕರೆ ಜಮೀನಿನಲ್ಲಿ ಬಿಟ್ಟು ಹೊರಟುಹೋಗಿದೆ. ಇನ್ನೂ ಕೆಲವುಕಡೆ ಒಂದು ಆಳು ಉದ್ದದಷ್ಟು ಮಣ್ಣು ಕೊರೆದುಕೊಂಡು ಹೋಗಿದೆ, ಕಾಲುವೆಯಂತೆಮಾಡಿದೆ ಎಂದರೆ ಅತಿಶಯೋಕ್ತಿಯಲ್ಲ. ಅದನ್ನು ಮಾನ್ಯಮಂತ್ರಿವರ್ಯರೂ ಸಹ ನೋಡಿದ್ದಾರೆ. ಅವರು ಬಂದಾಗಲೂಕೂಡ ತುಂಬ ಪ್ರವಾಹ ಹರಿಯುತ್ತಿತ್ತು. ಇತ್ತೀಚೆಗೂ ಸಹ ತುಂಬ ಪ್ರವಾಹ ಹರಿಯುತ್ತಾ ಇದೆ.

ಮುಳ್ಳೂರಿನ ಪರಿಸ್ಥಿತಿಯನ್ನು ಮಾನ್ಯಮಂತ್ರಿಗಳಾದ ಶ್ರೀ ವೀರಣ್ಣಗೌಡರು ಅಲ್ಲಿಗೆ ಬಂದಿದ್ದಾಗ ಕಣ್ಣಾರೆ ನೋಡಿದ್ದಾರೆ. ಅಲ್ಲಿ 100 ಎಕರೆ ಕಬ್ಬಿನಬೆಳೆ ಯಾವ ಉಪಯೋಗಕ್ಕೂ ಬಾರದ ಹಾಗೆ ನಷ್ಟವಾಗಿದೆ. ಅಷ್ಟು ಪ್ರಮಾಣದಲ್ಲಿ ಅಲ್ಲಿನ ಜನಗಳಿಗೆ ನಷ್ಟ ಆಗಿರುವಾಗ ಸರ್ಕಾರದವರು ಅವರಿಗೆ ಸೂಕ್ತ ಪರಿಹಾರವನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ವರ್ಷ ರಿಲೀಫ್ ಕಮಿಟಿಯ ಮುಖಾಂತರ ನಮಗೆ ಸರ್ಕಾರದ ನೆರವು ಬರುವುದಕ್ಕಿಂತ ಮುಂಚೆಯೇ ಕೊಳ್ಳೇಗಾಲ ಮತ್ತು ಇತರ ಪ್ರದೇಶಗಳಲ್ಲಿನ ಜನಗಳಿಂದ ಧಾನ್ಯರೂಪವಾಗಿ ಬಂದಂಥ ಸ್ವಲ್ಪ ಹಣ ಮತ್ತು 13-15 ಪಲ್ಲ ರಾಗಿ ಮತ್ತು ಇತರ ಧಾನ್ಯಗಳನ್ನು ಪ್ರವಾಹದಿಂದ ನೊಂದ ಜನಗಳಿಗೆ ಹಂಚುತ್ತಾ ಬಂದಿದ್ದೇವೆ. ಡಿವಿಜನಲ್ ಕಮೀಷನರು ನಮ್ಮ ತಾಲ್ಲೂಕಿನಲ್ಲಿ ಈಗ ಒಂದು ವಾರದಿಂದ ಪ್ರವಾಸಮಾಡಿ ಪ್ರವಾಹದಿಂದ ನೊಂದ ಜನಗಳಿಗೆ ಊಟವನ್ನು ಹಾಕುವುದಕ್ಕೆ ಮತ್ತು ಅವರಿಗೆ ಗುಡಿಸಲುಗಳನ್ನು ಕಟ್ಟುವುದಕ್ಕೆ ಇತ್ಯಾದಿಗಳಿಗೆ 6,800 ರೂಪಾಯಿಗಳ ರಿಲೀಫನ್ನು ಕೊಟ್ಟಿದ್ದಾರೆ. ಅವರು ಈಗ ಏನು ಪರಿಹಾರವನ್ನು ಹಂಚಿದ್ದಾರೆಯೋ ಅದು ತುಂಬಾ ಕಷ್ಟ ಎಂದು ನಾನು ತಿಳಿಸಬಯಸುತ್ತೇನೆ. ಮಾರ್ಜಿತಿಂಗಳಲ್ಲಿ ಆದ ನರ್ಕಾದ ಆರ್ಡರನ್ನು ನಡಿಲಿಸಿ ಈಗ ಪ್ರವಾಹದಿಂದ ನೊಂದವರಿಗೆ 40 ರೂಪಾಯಿಗಳಿಂದ 100 ರೂಪಾಯಿಗಳವರೆಗೆ ನಗದು ಪರಿಹಾರವನ್ನು ಕೊಡಬೇಕೆಂದು ಹೊಸದಾಗಿ ನರ್ಕಾರದ ಆರ್ಡರನ್ನು ಮಾಡಿದ್ದಾರೆಂದು ನಾನು ಕೇಳಿಸ್ತೇನೆ. ಆದುದರಿಂದ ಈಗಲೂ ಸಹ ಪ್ರವಾಹದಿಂದ ನೊಂದವರಿಗೆ 10 ರೂಪಾಯಿಗಳನ್ನಾದರೂ ಹೆಚ್ಚಿಸಿ ದರೆ ಒಳ್ಳೆಯದೆಂದು ನಾನು ಹೇಳುತ್ತೇನೆ. ಕೊನೆಯ ಪಕ್ಷ 40 ರೂಪಾಯಿಗಳ ಸಹಾಯವನ್ನು ಕೊಡಬೇಕು. ಇನ್ನೂ ಹೆಚ್ಚುಕೊಟ್ಟರೆ ಬಹಳ ಸಂತೋಷ. ಈಗ ತಕ್ಷಣ 40 ರೂಪಾಯಿಗಳನ್ನು ಪ್ರತಿ ನಂಸಾರಕ್ಕೂ ಕೊಡಬೇಕೆಂದು ನಾನು ನರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಇದರ ಜೊತೆಗೆ ಒಂದು ಪರ್ಮನೆಂಟ್ ರಿಲೀಫ್ ಮೆಷರ್‌ಮಾಡಬೇಕು. ಮಾನ್ಯಮಂತ್ರಿಗಳಾದ ಶ್ರೀ ವೀರಣ್ಣಗೌಡರು ಮತ್ತು ಶ್ರೀ ರಾಚಯ್ಯನವರು ಮುಳ್ಳೂರಿಗೆ ಬಂದಿದ್ದಾಗ ಆ ಊರಿನ ಜನರು 22 ಎಕರೆ ಇರತಕ್ಕ ಒಂದು ಜಮೀನನ್ನು ಅವರಿಗೆ ತೋರಿಸಿದ್ದಾರೆ. ಅವರು ಅದನ್ನು ನೋಡಿಕೊಂಡು ಬಂದಿದ್ದಾರೆ. ಅಧಿಕಾರವರ್ಗದವರೂ ಸಹ ಆ ಜಮೀನನ್ನು ಅಕ್ವೈರ್‌ಮಾಡಿಕೊಳ್ಳುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆದುದರಿಂದ ಆದಷ್ಟು ಜಾಗ್ರತೆ ಎಮರ್‌ಜೆನ್ಸಿ ಮೆಷರ್ಸ್‌ನಲ್ಲಿ ಆ ಜಮೀನನ್ನು ಅಕ್ವೈರ್‌ಮಾಡಿಕೊಂಡು ಮುಳ್ಳೂರಿನಲ್ಲಿರುವ 300 ಕುಟುಂಬಗಳಿಗೆ ನರ್ಕಾರದವರು ಉಚಿತವಾಗಿ ಲೇಔಟ್‌ಮಾಡಿಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ದಾಸನಪುರದ ಸುಮಾರು 200—300 ಕುಟುಂಬಗಳಿಗೆ ಲೇಔಟ್ ಮಾಡಿಕೊಡಲು ಗಾರ್ನಮೆಂಟ್ ಸಿಲ್ಕ್ ಫಿಲೇಚರ್ ಫ್ಯಾಕ್ಟರಿಯ ಪಕ್ಕದಲ್ಲಿ 18 ಎಕರೆ ಜಮೀನನ್ನು ಅಕ್ವೈರ್‌ಮಾಡಿಕೊಳ್ಳಲು ಸೆಕ್ಷನ್ 17ರ ರೀತ್ಯಾ ಈಗಾಗಲೇ ರೆವಿನ್ಯೂ ಅಧಿಕಾರಿಗಳು ರೆಕಮೆಂಡ್ ಮಾಡಿ ಡಿವಿಜನಲ್ ಕಮೀಷನರಿಗೆ ಕಳುಹಿಸಿದ್ದಾರೆ. ಅವನ್ನು ನರ್ಕಾರದವರು ಆದಷ್ಟು ಜಾಗ್ರತೆ ಅಕ್ವೈರ್ ಮಾಡಿಕೊಂಡು ದಾಸನಪುರದ ಜನಗಳಿಗೆ ಲೇಔಟ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹನುಗಳ್ಳಿ ಗ್ರಾಮ ನದಿಯ ದಂಡೆಯ ಮೇಲೆ ಇದೆ. ನದಿಗೂ ಮತ್ತು ಆ ಹಳ್ಳಿಗೂ 50 ಗಜ ದೂರ ಸಹ ಇಲ್ಲ. ಈ ಹಳ್ಳಿಗೆ ಪ್ರತಿ ವರ್ಷವೂ ಪ್ರವಾಹದಿಂದ ತೊಂದರೆಯಾಗುತ್ತಿದೆ. ಪ್ರವಾಹ ಬಂದಾಗ ಜನಗಳು ಹೊರಗಡೆ ಬರುತ್ತಾರೆ. ಅಮೇಲೆ ಪ್ರವಾಹ ಇಳಿದ ಮೇಲೆ ಹಿಂದೆ ಆದ ಕಷ್ಟಗಳನ್ನು ಮರೆತು ಪುನಃ ಅಲ್ಲಿಗೇ ಹೋಗುತ್ತಾರೆ. ಅವರು ತಮ್ಮ ಪೂರ್ವಿಕರ ಆಸ್ತಿಯನ್ನೂ ಬಿಟ್ಟು ಬೇರೆಕಡೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಈಗಾಗಲೇ ಪ್ರವಾಹ ಕಡಮೆ ಆದಮೇಲೆ ಕೆಲವರು ಪುನಃ ಅಲ್ಲಿಗೆ ಹೋಗಿದ್ದಾರೆಂದು ಕೆಲವು ವರದಿಗಳಿಂದ ತಿಳಿದುಬಂದಿದೆ. ಆದುದರಿಂದ ಆ ಬಗ್ಗೆ ಒಂದು ಕಾನೂನನ್ನು ಮಾಡಿ ಪೋಲೀಸಿನವರನ್ನು ಇಟ್ಟು ಪುನಃ ಜನಗಳು ಅಲ್ಲಿಗೆ ಹೋಗಿ ನೆಲಸದಂತೆ ಏರ್ಪಾಡನ್ನು ಮಾಡದಿದ್ದರೆ ಪ್ರತಿ ವರ್ಷವೂ ಸಹ ಅವರು ಪ್ರವಾಹದ ಹಾವಳಿಗೆ ಸಿಕ್ಕಿ ತೊಂದರೆಯನ್ನು ಅನುಭವಿಸುತ್ತಾರೆ. ಆದುದರಿಂದ ಅದನ್ನು ತಪ್ಪಿಸುವಂತೆ ನರ್ಕಾರದವರು ಏರ್ಪಾಡು ಮಾಡಬೇಕೆಂದು ನಾನು ಈ ಮೂಲಕ ವಿನ್ನವಿಸುತ್ತೇನೆ.

ಎಡಕುರಿಯ ಗ್ರಾಮದ ಜನಗಳಿಗೆ ಸತ್ಯೇಗಾಲ ಅಗ್ರಹಾರದ ಶ್ರೀ ಸಿದ್ದೇಗೌಡ ಎಂಬುವರು ಶಿವನ ಸಮುದ್ರದ ಹತ್ತಿರ 43 ಕುಟುಂಬಗಳಿಗೆ ಆಗುವಷ್ಟು ಎಂದರೆ 100 ಎಕರೆ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆ. ಅದುದರಿಂದ ಅಧಿಕಾರವರ್ಗದವರು ಮತ್ತು ಇಂಜಿನಿಯರುಗಳು ಬ್ಲಿಗೆ ಹೋಗಿ ಅದರ ಲೇಔಟ್ ಪ್ಲಾನನ್ನು ತಯಾರುಮಾಡಿಕೊಟ್ಟರೆ ಅಲ್ಲಿನ ಜನಗಳು ಬೇಗ ಅಲ್ಲಿಗೆ ಹೋಗಿ ನೆಲಸುವುದಕ್ಕೆ ಅವಕಾಶವಾಗುತ್ತದೆ. ಎಡಕುರಿಯ ಗ್ರಾಮದ ಜನಗಳು 400 ಎಕರೆ ಜಮೀನನ್ನು ಸಾಗುಮಾಡಿಕೊಂಡು ಬರುತ್ತಿದ್ದಾರೆ. ಅವರು ಯಾವ ಕಾಲದಲ್ಲೂ ಸಹ ಇಷ್ಟೊಂದು ದೊಡ್ಡ ಅವ್ಯವಸ್ಥೆಗೆ ಒಳಗಾಗಿರಲಿಲ್ಲ. ಈಗ ಅವರಿಗೆ

(ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ)

ಬಹಳ ನಷ್ಟವಾಗಿದೆ. ಆ 400 ಎಕರೆ ಜಮೀನನ್ನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ರಾಚಯ್ಯನವರು ಮತ್ತು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ಡೈರೆಕ್ಟರ್ ಆದ ಶ್ರೀ ಸುಬ್ಬಣ್ಣನವರೂ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಇನ್ನೂ ನಾಲ್ಕೈದು ವರ್ಷಗಳಾದರೂ ಸಹ ಯಾವ ವ್ಯವಸಾಯವನ್ನು ಮಾಡುವುದಕ್ಕೆ ಆಗುವುದಿಲ್ಲ. ಈಗ ಅದು ಬಹಳ ಹೀನಸ್ಥಿತಿಗೆ ಬಂದಿದೆ, ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆ ಜಮೀನನ್ನು ಕಳೆದುಕೊಂಡವರು ತುಂಬಾ ತೊಂದರೆಗೀಡಾಗಿದ್ದಾರೆ. ಯಾವಾಗಲೂ ಅವರು ಆ ಊರನ್ನು ಬಿಟ್ಟು ಹೊರಗಡೆ ಬರುವುದಿಲ್ಲವೆಂದು ದೃಢಮನಸ್ಸಿನಿಂದ ಇದ್ದವರು ಇವೊತ್ತು ಹೊರಗಡೆ ಬರುವುದಕ್ಕೆ ಒಪ್ಪಿಕೊಂಡಿದ್ದಾರೆ. ಆದುದರಿಂದ ಅವರಿಗೆ ಶಿವನ ಸಮುದ್ರದ ಕಾಡಿನಲ್ಲಿ ಒಬ್ಬೊಬ್ಬರಿಗೆ 5-10 ಎಕರೆ ಜಮೀನನ್ನು ಸಾಗು ಮಾಡುವುದಕ್ಕೆ ಕೊಡಲು ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು. ಅರೀತಿ ಅವರಿಗೆ ಒಬ್ಬೊಬ್ಬರಿಗೆ 5-10 ಎಕರೆ ಜಮೀನನ್ನು ವ್ಯವಸಾಯ ಮಾಡುವುದಕ್ಕೆ ಕೊಡುವುದಾದರೆ ಅವರು ಅಲ್ಲಿಗೆ ಬಂದು ಇರುವುದಕ್ಕೆ ಒಪ್ಪಿಕೊಂಡಿದ್ದಾರೆ.

ಮತ್ತೊಂದು ವಿಷಯವೇನೆಂದರೆ ಎಡಕುರಿಯ, ಮುಂತಾದ ಗ್ರಾಮಗಳಲ್ಲಿ ಪ್ರವಾಹದ ಹಾನಿಗೊಳಗಾಗಿರುವ 6-7 ಸಾವಿರ ಜನಗಳಿಗೆ ಇಂಟರೆಸ್ಟ್ ಫ್ರೀ ಲೋನನ್ನು ಕೊಡಬೇಕು. ವ್ಯವಸಾಯದ ಜಮೀನಿನಲ್ಲಿ ಅನೇಕ ಕಡೆ ಇನ್ನೂ ನೀರು ನಿಂತಿದೆ. ಗದ್ದೆಗಳಲ್ಲಿ ನೀರು ನಿಂತಿದೆ. ಈಗ ಪ್ರವಾಹದಿಂದ ಯಾರ ಯಾರ ಜಮೀನಿನಲ್ಲಿ ಫಸಲು ನಷ್ಟವಾಗಿದೆಯೋ ಅವರಿಗೆ ಮತ್ತೆ ವ್ಯವಸಾಯ ಮಾಡುವುದಕ್ಕೆ ಸರ್ಕಾರದವರು ಹಣ ಸಹಾಯ ಮಾಡಿದರೆ ಅವರು ತಮ್ಮ ವ್ಯವಸಾಯದ ಮತ್ತು ಇತರ ಕಾರ್ಯಗಳನ್ನು ಆರಂಭಿಸುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿರತಕ್ಕ ಜಮೀನುಗಳು ಬಹಳ ಉತ್ಕೃಷ್ಟವಾದ ಜಮೀನುಗಳು, ಆದುದರಿಂದ ಅಂತಹ ಕಡೆಗಳಲ್ಲಿ ಪ್ಯಾಮೆಂಟ್ ಮೆಜರ್ಸ್ ನಲ್ಲಿ ಒಂದು ಯೋಜನೆಯನ್ನು ತಯಾರಿಸಿ ಜನಗಳಿಗೆ ಆಗುವ ನಷ್ಟವನ್ನು ತಪ್ಪಿಸುವುದಕ್ಕೆ ಸರ್ಕಾರದವರು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಮತ್ತೊಂದು ವಿಷಯವೆನೆಂದರೆ ಇಲ್ಲಿ ನಮ್ಮ ಸರ್ಕಾರದವರು ಯಾವ ಆರ್ಡರನ್ನು ಮಾಡಿದರೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅದನ್ನು ಕಳುಹಿಸಿದರೂ ನೊಂದಿರುವ ಕುಟುಂಬಗಳಿಗೆ ನೀಡುವ ಸಹಾಯ ನೇರವಾಗಿ ತಲಪುವುದಕ್ಕೆ ಬಹಳ ಕಾಲವಾಗುತ್ತದೆ. ಆದಕ್ಕಾಗಿ ನಮ್ಮ ತಾಲ್ಲೂಕುಮಟ್ಟದಲ್ಲಿರುವ ಅಧಿಕಾರ ವರ್ಗದವರು ಕೊನೆಯಪಕ್ಷ ವಾರಕ್ಕೊಂದು ಸಲವಾದರೂ ಎರಡು-ಮೂರು ತಿಂಗಳುಗಳ ವರೆಗೆ ನಿರಾಶ್ರಿತರಾಗಿ ಹೊರಗೆ ಶಿಬಿರಗಳಲ್ಲಿರುವವರನ್ನು ಸಂದರ್ಶಿಸಿ ಅವರ ಕಷ್ಟಸುಖ, ಆರೋಗ್ಯ ಮುಂತಾದುದರ ಬಗ್ಗೆ ವಿಚಾರಮಾಡುವುದು ಸೂಕ್ತ. ಈಗ ಕೊಳ್ಳೆಗಾಲದಲ್ಲಿ ಸುಮಾರು 45 ಸಾವಿರ ಜನರಿರುವುದರಿಂದ ಎಪಿಡೆಮಿಕ್ ಹರಡಬಹುದೆಂಬ ಭಯವಿದೆ, ಸ್ಯಾನಿಟರಿ ಅರೇಂಜ್‌ಮೆಂಟ್ ಸರಿಯಾಗಿಲ್ಲ. ಸೂಕ್ತಕ್ರಮವನ್ನು ಕೈಕೊಂಡು ಮುಂದೆ ಸಾಂಕ್ರಾಮಿಕರೋಗ ಹರಡದಂತೆ ಮಾಡಬೇಕು. ಪಾರಕ್ಕೊಮ್ಮೆಯಾದರೂ ಭೇಟಿ ಕೊಟ್ಟರೆ ನೀರಿರುವ ಸಮಯ ಸಮುಪಯೋಗವಾಗುತ್ತಿದೆಯೇ, ಇಲ್ಲವೆ ಎಂದು ಮೇಲ್ಪಚಾರಣೆಮಾಡಿದಂತಾಗುತ್ತದೆ. ಆದುದರಿಂದ ತಾಲ್ಲೂಕುಮಟ್ಟದ ಅಧಿಕಾರ ವರ್ಗದವರು ನಾನು ಹೇಳಿದಂತೆ ಭೇಟಿ ಕೊಡುವುದು ಒಳ್ಳೆಯದು.

ಇನ್ನೊಂದು, ವಿಚಾರವೆಂದರೆ ಯಾವ ವಿಧವಾದ ಸಹಾಯ ಸರ್ಕಾರದವರು ನಿರಾಶ್ರಿತರಿಗೆ ಒದಗಿಸಿದ್ದಾರೆ ಎಂಬುದರ ಅರಿವು ಉಂಟುಮಾಡುವುದು ಒಳ್ಳೆಯದು. ಏಕೆಂದರೆ, ಅದು ನಿರಾಶ್ರಿತರಿಗೆ ಸರಿಯಾಗಿ ಗೊತ್ತಿಲ್ಲ. ಅದನ್ನು ಹೇಗೆ ಪಡೆಯಬೇಕು, ಯಾರನ್ನು ಕೇಳಿಬೇಕು ಎಂದು ಸಂಬಂಧಪಟ್ಟವರಿಗೆ ಅರಿವುಮಾಡಿಕೊಡುವುದು ಸೂಕ್ತ.

ಸರ್ಕಾರದ ಆರ್ಡರಿನಲ್ಲಿ ಪ್ರತಿಯೊಂದು ಕುಟುಂಬಕ್ಕೂ 300 ರೂಪಾಯಿಗಳಷ್ಟು ಬೆಲೆಬಾಳುವ ಮನೆಗೆ ಬೇಕಾದ ಮರಮುಟ್ಟು ವಗೈರೆ ಸಹಾಯಮಾಡುವುದಾಗಿ ತಿಳಿಸಿದ್ದಾರೆ. ಅದನ್ನು ಕೇಳಿದಾಗ ಫಾರೆಸ್ಟಿಗೆ ಹೋಗಿ ಕಡಿದುಕೊಂಡು ಬರಲು ಜನರಿಗೆ ಪರ್ಮಿಟ್ ಕೊಡಲು ಏರ್ಪಾಡುಮಾಡುತ್ತೇವೆ ಎಂದು ಹೇಳುವ ಧಾಟಿಯಲ್ಲಿ ತಿಳಿಸಿದರು. ಅರೀತಿ ಮಾಡುವುದು ಒಳ್ಳೆಯದಲ್ಲ. ಕೊಳ್ಳೇಗಾಲ ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಫಾರೆಸ್ಟ್ ಆಫೀಸಿದೆ. ಸರ್ಕಾರ ಅಲ್ಲೇ ಒದಗಿಸಿದರೆ ತುಂಬಾ ಉಪಕಾರವಾಗುತ್ತದೆ. ಏಕೆಂದರೆ ಜನರು ಆಸ್ತಿಪಾಸ್ತಿ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಅವರಿಗೆ ಎತ್ತು ಗಾಡಿಗಳ ಸೌಕರ್ಯವಿಲ್ಲ. ಆದುದರಿಂದ ಅವರು ಕಾಡಿಗೆ ಹೋಗಿ 20 ಮೈಲುಗಳ ದೂರದಿಂದ ತರುವುದು ಅಸಾಧ್ಯ. ಇದನ್ನು ಗಮನಿಸಿ ಸರ್ಕಾರದವರು ಕೊನೆಯ ಪಕ್ಷ ಕೊಳ್ಳೇಗಾಲದಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಾದರೂ ಹಂಚಿದರೆ ದೊಡ್ಡ ಉಪಕಾರವಾಗುತ್ತದೆ.

ಜನರಿಗೆ ಮುಫತ್ತಾಗಿ ಬೀಜ, ಗೊಬ್ಬರ ಮುಂತಾದ್ದನ್ನು ಸಕಾಲದಲ್ಲಿ ಕೊಟ್ಟರೆ ಈ ವರ್ಷದಲ್ಲಿ ಸಾಧ್ಯವಾದಷ್ಟು ಜಮೀನುಗಳಲ್ಲಿ ಫಸಲು ಕೆಗೆಯಲು ಸಾಧ್ಯವಾಗುತ್ತದೆಂದು ಸೂಚಿಸಲಿಚ್ಛಿಸುತ್ತೇನೆ.

ಕೆಲವರಿಗೆ 400 ಎಕರೆ ಜಮೀನಿದ್ದರೂ ವಿಪರೀತ ಮರಳು ಬಂದು ನಾಲ್ಕೈದು ವರ್ಷಗಳ ಕಾಲ ವ್ಯವಸಾಯಮಾಡುವುದಕ್ಕೆ ಅವಕಾಶವಿಲ್ಲದಂತಾಗಿರುವುದರಿಂದ ಅವರಿಗೆ ಜಮೀನು ಕಂದಾಯ ಮಾಫಿಮಾಡಬೇಕಾಗಿದೆ. ಈಗ ಮೂರು ವರ್ಷಗಳ ಕಂದಾಯ ಮಾತ್ರ ಮಾಫಿಮಾಡಬಹುದೆಂದು ರೂಲ್ಸ್ ನಲ್ಲಿದೆಯೆಂದು ತಿಳಿಸಿದ್ದಾರೆ. ಪ್ರತಿಯೊಂದು ತಾಲ್ಲೂಕಿನಿಂದಲೂ ವರದಿ ತರಿಸಿ ಎಲ್ಲೆಲ್ಲಿ ಮರಳು ಚಾಚಿ ವ್ಯವಸಾಯಮಾಡುವುದಕ್ಕೆ ಸಾಧ್ಯವಾಗಿಲ್ಲವೋ ಅಲ್ಲಿ ಕೊನೆಯ ಪಕ್ಷ ಮೂರು ವರ್ಷ ಅಥವಾ ಸಾಧ್ಯವಾದರೆ ಹೆಚ್ಚುಕಾಲ ಕಂದಾಯ ಮಾಫಿಮಾಡಬೇಕೆಂದು ಕೇಳಿಕೊಂಡು ಇಷ್ಟು ಹೇಳಲು ಅವಕಾಶಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸಿ ನನ್ನ ಭಾಷಣ ಮುಕ್ತಾಯಮಾಡುತ್ತೇನೆ.

*Sri B. V. BANUMIAH (Teachers' Constituency).—Mr. Chairman, Sir, I do not want to add to the description of the flood havoc in our State but I would like to offer a few suggestions. The Hon'ble Minister for Public Works in his extensive coverage of flood havoc has indicated the various districts and taluks that have been affected by the flood havoc in our State.

I would like to add to the suggestion that has been made by an elderly member who spoke yesterday, namely, that the Ministers should distribute amongst themselves the affected districts and taluks and visit those districts and taluks and see that relief work is carried on very expeditiously. The Government as well as all of us know fully well that the Government by itself will not be able to meet all the loss that has occurred except with the co-operation of the public. Of course, the Government has passed a number of orders from time to time increasing the amount that can be offered as interest-free loan as well as gratuitous relief to the various districts. I am afraid that the estimate of the Government of the loss of Rs. 10 crores is an underestimate. It has been found that in some cases the estimate has been an overestimate but many cases are there where the general reaction of the Government officials is to undere stimate the loss because they are afraid that there would be a good deal of demand from the public for relief. In order to minimise the quantum of relief that the public should get, the Government officials may underestimate the losses. For example, in the case of Mysore District and Coorg, they have said that the loss may be about Rs. 20 lakhs. I am told that in Virajpet itself the loss has been estimated by the Taluk Board at a minimum of Rs. 40 lakhs. I am only citing an example where this kind of a thing has happened. If we had adjourned without discussing the flood havoc and had met again after the recess after visiting the flood-affected areas to discuss it, we would have full information. Instead of depending upon Government handouts which are published in the press and which we have read and which we are repeating here, the purpose would have been served better if we had met to discuss this problem after August 22nd when we are supposed to meet again. Unfortunately, that is not possible now. I would, however, offer a suggestion that the P.W.D. Minister and the Revenue Minister should have informal discussion with the members of the Legislature coming from different districts where this flood havoc has taken place to a great extent after the break we are going to have for some time. Government will have to depend upon public contribution. Many people have come forward with donations. So, Government should make it very clear to the public that all these donations will get income tax concession.

Sri H. K. VEERANNA GOWDH.—That concession is given in respect of such donations.

Sri B. V. BANUMIAH.—My own students are going round the City of Mysore and when they approach people, many of them ask whether the donations are exempt from income-tax. Therefore, I request that a clear indication should be given to the people in this behalf. Probably, the people may not be aware of it. At the time of the reply, if the Minister were to make this very clear, it would go a very long way in helping the voluntary organisations which are already doing this work.

The Income Tax Commissioner has given permission but what has to be done is, instead of different agencies, different newspapers collecting the relief fund, the Government should open one fund and ask everyone to contribute to that fund. Now the *Deccan Herald*, *Prajavani* and *Samyuktha Karnataka* have been collecting funds and there is also the Chief Minister's Relief Fund. We should avoid this kind of collection and we should have one fund to which contributions could be made. If that is done, it will be easier for us to collect the donations. The Central Government industries in Mysore have given a lead by making a donation yesterday and the Mysore Government Industries should make a similar attempt. I hope the Minister for Labour will take the lead and ask them to make such a donation. An appeal from him will go a long way.....

Sri B. VAIKUNTA BALIGA.—It is not by the Industry. It is the donation by the staff.

Sri B. V. BANUMIAH.—Yes, by the staff. In this connection I wish

(SRI B. V. BANUMIAH)

to state that the Meteorological Department has to be strengthened in our State. This is one of the points that has not been properly appreciated. I know the Meteorological Department is working in our State. They request one of the high school teachers to be in charge of the department and they are expected to send three telegrams from different areas. They are given some allowance for doing this job. Especially in Malnad areas there should be special officers at particular points to attend to these things. At present there are people who do this work and they are offered Rs. 25 per month. Those people are transferred from time to time and they are expected to send information to Poona which is relayed back to Bangalore. That is what is happening now and it should be looked into by the Government.

Yesterday or the day before yesterday, the hon'ble lady member pointed out that one of the houses which was ready for *GRUHAPRAVESHAM* was destroyed. Probably, she referred to the incident in Nanjangud. It would be interesting for the Minister to know that this area was declared as a low-lying area and that nobody should be permitted to construct any building. It is a matter to be investigated as to how the municipality granted licence when there was an order. It would be worthwhile to consider legislative measures whereby the Government should ban construction of houses in low-lying areas in different parts of the State.

A suggestion was offered yesterday by my colleague Dr. Champa that the Government should consider the deepening of the river bed at particular spots, not throughout the course of the river but where the river is shallow. This can be undertaken and some kind of relief could be given.

The Government have passed orders regarding interest-free loans and other facilities. They have fixed a maximum amount of Rs. 100 but this sum will not be enough and the Government can do well to consider the question of increasing the maximum. If it is limited to Rs. 100 it will not fetch even four zinc sheets. Therefore, it would be worthwhile for the Government to consider increasing the amount.

Sometime ago I remember when Sri H. Siddaveerappa was a Minister, the Government of Mysore had an idea of purchasing a helicopter. I remember he did make a trip from Bangalore to Davangere. It would be really worthwhile to have one or two helicopters which would be useful in emergencies. The Government should think of having for themselves or request the army people to have them. What the hon'ble member Sri C. S. Balakrishna Gowda has said is a heart-rending story which we have not heard so far. We may not be able to get more such information. It would be possible for the Engineering Department and Government to give speedy relief if they actually visit those areas. Those areas have been cut off and the Government should visit those places frequently. It would be better that the Government could as well think seriously about the question of having a helicopter which would be useful in these times. I would like the Government of Mysore to appeal to the Government of India and see that maximum help is got from them. In the booklet "Panchayatrajya" (ಪಂಚಾಯತ ರಾಜ್ಯ) which has been given to us, the Government of India experts say—

"ನೀರಿನ ಕೊರತೆ ಇರುವುದರಿಂದ ವ್ಯವಸಾಯದ ಉತ್ಪಾದನೆಯ ಕಾರ್ಯ ಬಹು ರಭಸದಿಂದ ಸಾಗುತ್ತಿದೆ. ಮುಂದುವರಿದ ಉತ್ತಮ ಮಟ್ಟದ ವ್ಯವಸಾಯ ವಿಧಾನವನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ....."

This article has been translated by our own people. So, now when we have more water we can ask them to give more aid. I hope the Minister will bank his arguments on the translator's mistake or on the mistake of the Experts Committee of the Government of India. I hope the Government will be able to take the suggestions and see that the people are not put to great hardships as a result of the rains in the monsoons.

I would like to add one more word to what my friend Sri T. N. Kempahonniah has said. The Ministers should go on camping in each taluk and they must have full power to pass orders. The red tape should be cut. The Government officers, we are glad to say, have done good work and we want the Government to do similarly to those people who have suffered very badly. All of us should contribute our mite to see that these people are given the necessary relief.

Mr. CHAIRMAN.—The House will now rise and meet after half an hour.

The House adjourned for recess at Thirty Minutes past Ten of the Clock and re-assembled at Eleven of the Clock.

[Mr. CHAIRMAN in the Chair.]

ಶ್ರೀ ಎಚ್. ರಾಚಯ್ಯ (ವ್ಯವಸಾಯ ಮತ್ತು ನಮಾಜಿಕಾರ್ಥಿಣ ಶಾಖೆಗಳ ಮಂತ್ರಿಗಳು).—ಸ್ವಾಮಿ, ಇತ್ತೀಚೆಗೆ ನಮ್ಮ ರಾಜ್ಯದ ನದಿಗಳಲ್ಲಿ ಅತಿಯಾದ ಪ್ರವಾಹದಿಂದ ಅನೇಕ ಜನರು ಅಪಾರ ನಷ್ಟಕ್ಕೊಳಗಾಗಿರುವ ವಿಚಾರದಲ್ಲಿ ಈ ಮಾನ್ಯ ಸಭೆಯ ಸದಸ್ಯರು ಹೆಚ್ಚು ಪ್ರಸ್ತಾಪ ಮಾಡಿ ಸೂಕ್ತ ಸಲಹೆಗಳನ್ನು ಕೊಟ್ಟು ರಚನಾತ್ಮಕ ಟೀಕೆಗಳನ್ನು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಚಂದಿಸುತ್ತಾ, ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಆಹಾರೋತ್ಪತ್ತಿಗೆ ಮತ್ತು ಆಹಾರೋತ್ಪತ್ತಿ ಮಾಡುವ ರೈತರು ಮತ್ತು ರೈತ ಕಾರ್ಮಿಕರಿಗೆ ಈ ಪ್ರವಾಹದ ಅನಾಹುತದಿಂದ ಹೆಚ್ಚಾದ ನಷ್ಟವಾಗಿರುವ ವಿಚಾರವನ್ನು ಪ್ರಸ್ತಾಪಿಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಜನ ಬಡವರು ಪ್ರಾಣಕೂಡ ಕಳೆದುಕೊಂಡಿದ್ದಾರೆ. ನೊಂದ ಹೃದಯದಿಂದ ಅವರಿಗೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇನೆ.

ಇದೇ ಸಂದರ್ಭದಲ್ಲಿ ದೇಶಕ್ಕೆ ಸಂಬಂಧಪಟ್ಟಂತೆ ಎಷ್ಟು ನಷ್ಟವಾಗಿದೆ ಎನ್ನುವ ವಿಚಾರದಲ್ಲಿ ಹೇಳುವಾಗ, ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಹತ್ತಾರು ವರ್ಷಗಳಿಂದಲೂ ಇಲ್ಲದಷ್ಟು ಹೆಚ್ಚಿನ ಪ್ರಮಾಣದಲ್ಲಿ ಪ್ರವಾಹ ಬಂದಕಾರಣ, ಈ ಪ್ರವಾಹದ ಕ್ರೂರ ಆಕ್ರಮಣಕ್ಕೆ 94068 ಎಕರೆ ಜಮೀನು ಈಡಾಗಿದೆ. ವಿವರಗಳನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಾದರೆ, ಬತ್ತದ ನಾಟಿ ಫಸಲಿಗೆ, ಎಂದರೆ ಒಟ್ಟು ಹುಯ್ದಿರುವುದಕ್ಕೆ (paddy nursery) 2016 ಎಕರೆಯಷ್ಟು ಪೈರಿಗೆ ನಷ್ಟವಾಗಿದೆ. ನಾಟ ಹಾಕಿದ ಮೇಲೆ 55917 ಎಕರೆ ಜಮೀನಿನಲ್ಲಿ ಚೆನ್ನಾಗಿ ಬರುತ್ತಿದ್ದ ಬತ್ತದ ಫಸಲಿಗೆ ನಷ್ಟವಾಗಿದೆ. 6731 ಎಕರೆ ಪ್ರದೇಶದಲ್ಲಿ ರಾಗಿ ಫಸಲಿಗೆ ನಷ್ಟವಾಗಿದೆ. 5973 ಎಕರೆಯಲ್ಲಿ ಜೋಳದ ಫಸಲಿಗೆ ನಷ್ಟವಾಗಿದೆ, 2500 ಎಕರೆಯಲ್ಲಿ ಕಡಲೇಕಾಯಿ ಫಸಲಿಗೆ ನಷ್ಟವಾಗಿದೆ. 1309 ಎಕರೆ ಪ್ರದೇಶದಲ್ಲಿ ಕಬ್ಬಿನ ಫಸಲಿಗೆ ನಷ್ಟವಾಗಿದೆ. ಇತರ ಪ್ಲಾಂಟೇಷನ್ ಕ್ರಾಪ್ಸ್ ವಿಚಾರವಾಗಿ ಹೇಳುವುದಾದರೆ, ಕಾಫಿ ಮತ್ತು ಏಲಕ್ಕಿ ಬೆಳೆ ಸುಮಾರು 33.5 ಎಕರೆಯಷ್ಟು ಪ್ರದೇಶದಲ್ಲಿ ನಷ್ಟವಾಗಿದೆ. ಇತರ ಫಸಲುಗಳಿಗೆ ಎಂದರೆ ಆಲೂಗೆಡ್ಡೆ, ಮೆಣಸಿನಕಾಯಿ, ನೀರುಳ್ಳಿ ಹೂವು, ತರಕಾರಿ, ಹಣ್ಣು ಹಂಪಲು ವೀಳೆಯದೆಲೆ ತೋಟ, ಕೆಲವು ಭಾಗದಲ್ಲಿ ಉಪ್ಪುನೀರಿಳೆ ಫಸಲಿಗೆ ನಷ್ಟವಾಗಿದೆ. ಮೈಸೂರು, ಟಿ. ನರಸೀಪುರದಲ್ಲಿ ಹೊಳೆಯ ಪಕ್ಕದಲ್ಲಿ ಹಾಕಿರುವ ನರ್ಸರಿಗಳಲ್ಲಿ ಉಪ್ಪುನೀರಿಳೆ ಬೆಳೆ ನಷ್ಟವಾಗಿದೆ. ಕೆಲವು ಸ್ಥಳಗಳಿಗೆ ಹೋಗಿ ನೋಡಿಕೊಂಡು ಬಂದೆ, ಒಂದು ಎಕರೆ, ಅರ್ಧ ಎಕರೆ, ಕಾಲು ಎಕರೆಯಲ್ಲಿ ವೀಳೆಯದೆಲೆ ತೋಟ ಮಾಡಿಕೊಂಡು ಬಡವರು ಜೀವನ ಮಾಡಿಕೊಳ್ಳುತ್ತಿದ್ದರು, ಅವೆಲ್ಲವೂ ಪೂರ್ಣವಾಗಿ ನಾಶವಾಗಿ ನೊಂದ ಮನಸ್ಸಿನಿಂದ ಜನರು ದುಃಖಪ್ರದರ್ಶನ ಮಾಡಿದುದನ್ನು ನೋಡಿಕೊಂಡು ಬಂದಿದ್ದೇನೆ. ಒಟ್ಟಿನಲ್ಲಿ ಸೇಕಡ 90 ರಿಂದ 95 ರವರೆಗೆ ರೈತರು ಮತ್ತು ರೈತ ಕಾರ್ಮಿಕರಿಗೇ ನಷ್ಟವಾಗಿದೆಯೇ ಹೊರತು ಇತರ ಜನರಿಗೆ ಅಷ್ಟು ಅಪಾರವಾದ ನಷ್ಟವಾಗಿಲ್ಲ.

ಶ್ರೀ ಟಿ. ಎಚ್. ಕೆಂಪಹೊನ್ನಯ್ಯ.—ತೆಂಗು, ಅಡಕೆ ಬೆಳೆಗಳಿಗೆ ನಷ್ಟವಾಗಿದೆಯೆ?

ಶ್ರೀ ಎಚ್. ರಾಚಯ್ಯ.—ಸಾವಿರಾರು ಅಡಕೆ ಮರಗಳು ಮುರಿದುಹೋಗಿ ಶಿವಮೊಗ್ಗ, ಉತ್ತರ ಕರ್ಣಾಟಕ, ದಕ್ಷಿಣ ಕನ್ನಡ, ಕೊಡಗು ಮುಂತಾದ ಜಿಲ್ಲೆಗಳಲ್ಲಿ ಅಪಾರ ನಷ್ಟವಾಗಿದೆ. ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ನೋಡಿಕೊಂಡು ಬಂದಿದ್ದೇನೆ. ಇನ್ನು ಸ್ವಲ್ಪ ದಿನಗಳಲ್ಲಿ ಕೊಡಗುಜಿಲ್ಲೆಯಲ್ಲಿ ಪ್ರವಾಸ ಮಾಡಬೇಕು. ರೈತರಿಗಾಗಿರುವ ನಷ್ಟವನ್ನು ಇನ್ನೂ ವಿವರವಾಗಿ ತಿಳಿದುಕೊಳ್ಳಬೇಕೆಂದು ನನ್ನ ಆಕಾಂಕ್ಷೆ. ನಮ್ಮ ರಾಜ್ಯಕ್ಕೆ ಎರಡು ರೀತಿಯಲ್ಲಿ ನಷ್ಟವಾಗಿದೆ, ರೈತರಿಗೆ ವೈಯಕ್ತಿಕವಾಗಿ ನಷ್ಟವಾಗಿದೆ. ತಕ್ಕಾವಿ ಸಾಲವನ್ನು ಕೊಟ್ಟರೂ ರೈತರು ತಮ್ಮ ಭೂಮಿ, ಫಸಲು ಕೊಚ್ಚಿಕೊಂಡು ಹೋಗಿರುವುದನ್ನು ಸುಧಾರಿಸಿಕೊಳ್ಳಬೇಕಾದರೆ ಹತ್ತಾರುವರ್ಷಗಳು ಬೇಕಾಗುತ್ತವೆ. ಅದರಲ್ಲಿಯೂ ಹೆಗ್ಗಡದೇವನ ಕೋಟೆ ಮುಂತಾದ ಕಡೆಗಳಲ್ಲಿ ಬಹಳ ಕಷ್ಟವಾಗಿದೆ. ಕೆಲವು ಕಡೆ ರಸ್ತೆ ಕೊಚ್ಚಿಕೊಂಡು ಹೋಗಿದೆ, ಜಲ್ಲಿಕಲ್ಲು, ಗುಡಿಸಲುಗಳಲ್ಲಿದ್ದ ರುಬ್ಬುಗುಂಡು ಮುಂತಾದುವೆಲ್ಲ ಕೊಚ್ಚಿಕೊಂಡು ಹೋಗಿವೆ. ಕಲ್ಲು ಮರಗಳು ಗದ್ದೆಗಳ ಮೇಲೆ ಅನೇಕ ಕಡೆ ಹರಡಿರುವುದನ್ನು ನೋಡಿದ್ದೇನೆ. ರೈತರು ತಡೆದುಕೊಳ್ಳಲು ಶಕ್ತಿಯಿಲ್ಲದಷ್ಟು ಅಪಾರ ನಷ್ಟವಾಗಿದೆ. ಇದಕ್ಕಾಗಿ ನಾನು ನೊಂದ ಮನಸ್ಸಿನಿಂದ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇನೆ. ಯಾವ ರೈತರು ಒಳ್ಳೆಯ ಗೊಬ್ಬರ ಹಾಕಿ ಚೆನ್ನಾಗಿ ವ್ಯವಸಾಯ ಮಾಡಿದ್ದು ಫಸಲನ್ನು ಕಳೆದುಕೊಂಡಿದ್ದಾರೋ, ಯಾರಿಗೆ ಮತ್ತೆ ವ್ಯವಸಾಯಕ್ಕೆ ಅಗತ್ಯವಾದ ಪದಾರ್ಥಗಳನ್ನು ಕೊಳ್ಳುವುದಕ್ಕೆ ಶಕ್ತಿಯಿಲ್ಲವೋ ಅಂಥ ರೈತರಿಗೆ ಮುಫ್ತಾಗಿ ಬೀಜವನ್ನು ನರಬರಾಯಿ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಇದನ್ನು ಜಾರಿ ಮಾಡಲು ನೊಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಕೊಂಡುಕೊಳ್ಳುವ ಶಕ್ತಿಯಿರುವವರಿಗೆ ತಕಾವಿ ಸಾಲವನ್ನು ಬಡ್ಡಿಯಿಲ್ಲದೆ ಕೊಟ್ಟು ಸಹಾಯ ಮಾಡಬೇಕೆಂದು ನೂಚನೆ ಕೊಟ್ಟಿದ್ದೇವೆ. ನರ್ಸರಿ ಫಸಲು ಮಾಡಬೇಕೆಂದಿದ್ದರೆ ಅಂಥವರಿಗೆ ಬಡವರಾದ ರೈತರಿಗೆ ಗೊಬ್ಬರವನ್ನೂ ಮುಫತ್ತಾಗಿ ಕೊಡಲು ಏರ್ಪಾಡು ಮಾಡಬೇಕೆಂದು ಸಹಕಾರ ಮಂತ್ರಿಗಳನ್ನು

(ಶ್ರೀ ಎಚ್. ರಾಚಯ್ಯ)

ಕೇಳಿಕೊಂಡಿದ್ದೇನೆ. ತಿರುಮಕೂಡಲು ನರಸೀಪುರ ಮುಂತಾದ ಕಡೆ ಊರುಗಳೇ ಕೊಚ್ಚಿಕೊಂಡು ಹೋಗಿರುವುದನ್ನು ನೋಡಿದ್ದೇನೆ. ಅನೇಕರು ಮನೆ ಮಠಗಳನ್ನು ಕಳೆದುಕೊಂಡಿದ್ದಾರೆ. ಈ ವಿಷಯದಲ್ಲಿ ಏನು ಮಾಡಬೇಕೆಂಬ ಬಗ್ಗೆ ಸಭಾ ನಾಯಕರು ತಿಳಿಸುತ್ತಾರೆ. ರೈತರು, ವ್ಯವಸಾಯ ಕಾರ್ಮಿಕರಿಗೆ ಅಪಾರ ನಷ್ಟವಾಗಿರುವುದನ್ನು ವ್ಯವಸಾಯ ಮಂತ್ರಿಯಾದ ನಾನು ವೈಯಕ್ತಿಕವಾಗಿ ಮಾನ್ಯ ಸದಸ್ಯರ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ತಿಳಿಸಿದ್ದೇನೆ. ಹಣಕಾಸಿನ ಪರಿಸ್ಥಿತಿ ಸರಿಯಾಗಿದ್ದರೆ, ಆಹಾರೋತ್ಪತ್ತಿಯ ದೃಷ್ಟಿಯಿಂದ ಭೂಮಿ, ಫಸಲು ಏನು ನಷ್ಟವಾಗಿದೆಯೋ ಅದನ್ನೆಲ್ಲಾ ಕೊಡಬೇಕೆಂದು ನನ್ನ ಅಭಿಪ್ರಾಯ.

ಇಂದು ರಾಜ್ಯಾದಳಿತದ ಶಕ್ತಿಯೇ ಸರ್ಕಾರದ ಶಕ್ತಿ. ಸರಕಾರದ ಶಕ್ತಿಯೇ ರಾಜ್ಯದ ಶಕ್ತಿ. ನಮ್ಮ ಶಕ್ತಿಗೆ ಏನು ಸಾಧ್ಯವೋ ಅಂತಹ ರೂಪದಲ್ಲಿ ಮಾತ್ರ ನಾವು ದೇಶದ ಹಿತವನ್ನು ನಮ್ಮ ಮನಸ್ಸಿನಲ್ಲಟ್ಟುಕೊಂಡು ಯಾವ ಯಾವ ರೀತಿಯಲ್ಲಿ ನಷ್ಟವಾಗಿದೆ, ಯಾವ ಯಾವ ರೀತಿಯಲ್ಲಿ ಪರಿಹಾರ ಮಾಡಬೇಕು ಎಂಬುದನ್ನು ವಿಚಾರ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಶಕ್ತಿಮೀರಿ ಸಹಾಯ ಮಾಡಿದ್ದಕ್ಕೆ ನಾವು ಮಾಡುವುದನ್ನು ತಾವು ಒಪ್ಪುವುದಾದರೆ ನಮ್ಮದೇನೂ ಅಡ್ಡಿ ಇಲ್ಲ. ಕೇಂದ್ರ ಸರ್ಕಾರದ ಮಂತ್ರಿಗಳೊಡನೆ ಪ್ರಸ್ತಾಪ ಮಾಡಿದ್ದೇವೆ. ಉತ್ತರ ಪ್ರದೇಶದಲ್ಲಿ ಸಾಮಾನ್ಯವಾದಂಥ ಇಂಥ ವಿಪತ್ತು ಆಗಾಗ್ಗೆ ಬರುತ್ತದೆ. ಅದಕ್ಕೆ ನಿಬಂಧನೆಗಳನ್ನು ಮಾಡಿದ್ದೇವೆ. ಅದೇ ರೀತಿ ಇದಕ್ಕೂ ಸಹಾಯ ಮಾಡಲು ಯೋಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಇವೊತ್ತಿನ ದಿವಸ ಮೊದಲನೆಯದಾಗಿ ರೈತರಿಗೆ, ಅವರು ಸಹಿಸಿಕೊಳ್ಳಲಾರದಷ್ಟು ಭೂಮಿ ಕೊಚ್ಚಿ ಹೋಗಿ, ಫಸಲು ನಷ್ಟವಾಗಿರುವುದರಿಂದ ವೈಯಕ್ತಿಕವಾಗಿ ಅವರಿಗೆ ತೊಂದರೆಯಾಗಿದೆ. ಮತ್ತು ರಾಜ್ಯಕ್ಕೆ ಆಹಾರ ಬಹಳ ಮುಖ್ಯವಾದ ಪ್ರಶ್ನೆ ಆಗಿದೆ. ನನಗೆ ಒಂದು ಆಶಾದಾಯಕ ಮನೋಭಾವ ಏನಿತ್ತು ಎಂದರೆ 10-15 ವರ್ಷಗಳಿಂದ ಯಾವ ವರ್ಷದಲ್ಲೂ ಇಲ್ಲದಷ್ಟು ಪ್ರಮಾಣದ ಆಹಾರ ಈ ವರ್ಷ ಆಗುವುದೆಂದು ಇತ್ತು. ಈಗಲೂ ಆ ವಿಶ್ವಾಸ ಇದೆ; ಇಷ್ಟು ಬಾಗ್ಯತೆ ಹೇಳುವುದಕ್ಕೆ ಆಗಲಾರದು. ಆದರೂ ನಾನು ತಿಳಿದುಕೊಂಡಿರುವ ರೀತಿಯಲ್ಲಿ ಈ ವರ್ಷ ಕಳೆದ 10-12 ವರ್ಷಗಳಲ್ಲಿ ಇಲ್ಲದಷ್ಟು ಹೆಚ್ಚು ಪ್ರಮಾಣದಲ್ಲಿ ಹೆಚ್ಚು ಉತ್ಪನ್ನ ಆಗತಕ್ಕ ಆಶೆ ಇದೆ. ಪ್ರವಾಹದಲ್ಲಿ ನಷ್ಟಕ್ಕೆ ಪಡಾಗಿರುವುದು ಕೇವಲ ನುಮಾರು ಒಂದು ಲಕ್ಷ ಎಕರೆ. ಉಳಿದ ಪ್ರದೇಶದಲ್ಲಿ ಸಾಕಾದಷ್ಟು ಮಳೆ ಆಗಿದೆ. ಬೆಂಗಳೂರು, ಕೋಲಾರ, ತುಮಕೂರು ಇಂಥಾ ಜಿಲ್ಲೆಗಳಲ್ಲಿ ಕೆಲವು ಭಾಗ ಬಿಟ್ಟು ಉಳಿದ ಭಾಗಗಳಲ್ಲಿ ಇತರ ವರ್ಷಗಳಿಗೆ ಹೋಲಿಸಿದರೆ ಸಾಕಾದಷ್ಟು ಮತ್ತು ಸಕಾಲದಲ್ಲಿ ಮಳೆ ಆಗಿರುವಕಾರಣ ಈ ವರ್ಷ ಹೆಚ್ಚಿನ ಆಹಾರ ಉತ್ಪನ್ನ ವಾಗತಕ್ಕ ಒಂದು ಭರವಸೆ, ನಂಬಿಕೆ, ವಿಶ್ವಾಸ ಸರ್ಕಾರಕ್ಕೆ ಇದೆ. ಆದರೂ ಸಹ ಈ ಸಂದರ್ಭದಲ್ಲಿ ಕೆಲವು ರೈತರು ಪ್ರತ್ಯಕ್ಷವಾಗಿ ವಿಕೋಪದಿಂದ ಮತ್ತು ಪ್ರವಾಹದ ಘೋರವಾದ ಅಕ್ರಮಣಕ್ಕೆ ತುತ್ತಾಗಿ ಒಂದು ಲಕ್ಷ ಎಕರೆಯಷ್ಟು ಅವರ ಜಮೀನು ಮುಳುಗಡೆಯಾಗಿದೆ. ಅನೇಕ ರೀತಿಯಲ್ಲಿ ತೊಂದರೆಗೆ ಮತ್ತು ವಿಪತ್ತಿಗೆ ಒಳಗಾಗಿದ್ದಾರೆ. ಆದುದರಿಂದ ಈಗಾಗಲೇ ನಾವು ಸೂಕ್ತವಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸರ್ಕಾರಕ್ಕೆ ಎಷ್ಟು ಶಕ್ತಿ ಇದೆಯೋ ಅಷ್ಟು ಮಾಡಿದ್ದೇವೆ. ಶಕ್ತಿಮೀರಿ ಮಾಡುವುದರಿಂದ ಇತರ ಅನೇಕ ಯೋಜನೆಗಳಿಗೆ ತೊಂದರೆಯಾಗಬಹುದು. ಅಂತೂ ಹೆಚ್ಚಿಗೆ ಆಗದಿದ್ದರೂ ಸಾಕಾದಷ್ಟು ಪ್ರಮಾಣದಲ್ಲಿ, ಸಕಾಲದಲ್ಲಿ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ನುಮಾರು 49,850 ಎಕರೆ ಜಮೀನು ನಲ್ಲಿ ಮರಳು ಮುಚ್ಚಿಕೊಂಡಿದೆ. ಮತ್ತು ಕೆಲವು ಕಡೆ ಭೂಮಿ ಅಪಾರವಾಗಿ ಕೊಚ್ಚಿ ಹೋಗಿ ನಷ್ಟವುಂಟಾಗಿದೆ. ಇದಕ್ಕೆ ಸಹಾನು ಭೂತಿಯನ್ನು ವ್ಯಕ್ತ ಪಡಿಸಿದ್ದೇವೆ. ಮತ್ತು ಸಾಕಾದಷ್ಟು ಪ್ರಮಾಣದಲ್ಲಿ ಬಡ ರೈತರಿಗೆ ಮುಫತಾಗಿ ಬೀಜ ಮತ್ತು ಸಸಿಗಳು, ಗೊಬ್ಬರ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಇಷ್ಟು ವಿಷಯವನ್ನು ಮಾನ್ಯ ಸಭೆಯ ಮತ್ತು ಮಾನ್ಯ ಸದಸ್ಯರ ಗಮನಕ್ಕೆ ತಂದರೆ ಸಾಕಾದಷ್ಟು ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಅವರಿಗೆ ಸಮಾಧಾನವಾಗುವುದಾದರೆ ಒಳ್ಳೆಯದು. ಇನ್ನು ಮುಂದಾದರೂ ಹೆಚ್ಚು ಏವರ ಬಂದರೆ ಅದರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳತ್ತೇವೆ ಎಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

*ಶ್ರೀ ಎಚ್. ಕೆ. ವೀರಣ್ಣಗೌಡ(ಲೋಕೋಪಯೋಗಿ ಮತ್ತು ಎಡ್ಯುಕೇಷನ್ ಶಾಖೆಗಳ ಮಂತ್ರಿಗಳು):— ಅಧ್ಯಕ್ಷರೇ, ಮೂರು ದಿವಸಗಳಿಂದ ಈ ವಿಷಯ ಚರ್ಚೆಯಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂಥಾ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ನೀಡಿದ್ದಾರೆ, ಮತ್ತು ಟೀಕೆಗಳನ್ನು ಸಹ ಮಾಡಿದ್ದಾರೆ. ಟೀಕೆ ಮಾಡದೇ ಯಾವ ಕೆಲಸವೇ, ಆದರೂ ಕೂಡ ತೃಪ್ತಿಕರವಾಗಿ ನಡೆಯುವುದಿಲ್ಲ ಎಂಬುದನ್ನು ಸರ್ಕಾರ ಮನಗಂಡಿದೆ, ವೈಯಕ್ತಿಕವಾಗಿ ನಾನೂ ಮನಗಂಡಿದ್ದೇನೆ. ಟೀಕೆ ಬಹಳ ಅಗತ್ಯ. ಹಾಗೆಯೇ ಸಲಹೆಯೂ ಕೂಡ ಬಹಳ ಅಗತ್ಯ. ಟೀಕೆ ಮತ್ತು ಸಲಹೆ ಈ ಎರಡಕ್ಕೂ ಒಂದು ಮಿತಿ ಇರಬೇಕೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳವುದಕ್ಕೆ ಇಷ್ಟ ಪಡುತ್ತೇನೆ. ಟೀಕೆ ಅತಿಯಾಗಿ ಅದು ದೋಷಾರೋಪಣೆ ಮಾಡುತ್ತಾರೆ ಅನ್ನುವಷ್ಟು ಮಟ್ಟಿಗೆ ಆದರೆ ಪ್ರಯೋಜನವಾಗುವುದಿಲ್ಲ. ಅದರಿಂದ ಆಗತಕ್ಕ ಪರಿಣಾಮ, ಉದ್ದೇಶ ಪೂರ್ಯಕವಾಗಿ ಮಾಡುತ್ತಾ ಇದ್ದಾರೆ, ಬೇರೆ ಕೊಡಬಾರದು ಎಂದು ಆಗುತ್ತದೆ. ಹಾಗೆಯೇ ಸಲಹೆಯನ್ನು ಸಹ ಕಾರ್ಯಗತ ಮಾಡುವುದಕ್ಕೆ ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟು ಮಟ್ಟಿಗೆ ಸಲಹೆ ಕೊಡುವುದು ಒಳ್ಳೆಯದು. ಆದರ್ಶಪ್ರಿಯವಾದ ಅನೇಕ ಅಂಕಿ ಅಂಶಗಳನ್ನು ಗಮನದಲ್ಲಟ್ಟುಕೊಂಡು, ಸಾಧ್ಯವೇ, ಅಸಾಧ್ಯವೇ ಎಂಬುದನ್ನು ಯೋಚನೆ ಮಾಡದೇ ಸಲಹೆ ಕೊಟ್ಟರೆ, ಅದು ಆಗದೇ ಇರುವಂಥ ಕೆಲಸ, ನುಮ್ಮನೆ ಆಕಾಶಪುರಾಣ ಎಂಬ ಭಾವನೆ ಮನಸ್ಸಿಗೆ ಬರುತ್ತದೆ. ಹೀಗೆ ಟೀಕೆ ಮಾಡಿದವರ ಪೈಕಿ ಕೆಲವು ಸ್ನೇಹಿತರು ವಿಷಯ ಏನೆಂಬುದನ್ನು ಮನದಟ್ಟು ಮಾಡಿಕೊಳ್ಳದೇ ಟೀಕೆಗೋಸ್ಕರ ಟೀಕೆ ಎಂದು ಮಾಡಿದರೋ ಏನೋ ಎಂದು ನನ್ನ ಮನಸ್ಸಿಗೆ ಕಾಣುತ್ತಿದೆ. ಹಾಗೆಯೇ ಸಲಹೆಗಳ ಪೈಕಿ ಪ್ರವಾಹ ತಡೆಗಟ್ಟುವುದಕ್ಕೆ ಶಾಶ್ವತವಾದ ಕಾರ್ಯಗಳು, ಜನರಿಗೆ ಮುಂದೆ ತೊಂದರೆ ಆಗದಂತೆನೋಡಿಕೊಳ್ಳುವುದಕ್ಕೆ ವಿಶೇಷವಾದ ಕಾರ್ಯ ಏನ ಮಾಡಬೇಕೆನ್ನುವುದಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಸಾಧ್ಯ, ಕಷ್ಟ, ಸಾಧ್ಯ, ಕಾರ್ಯತಃ ಅಸಾಧ್ಯ ಎಂದು ಹೇಳಬಹುದು. ಅಂತಹ ಸಲಹೆಗಳನ್ನು ಸಹ ಮಾಡಿದ್ದಾರೆ. ಒಂದು ಎಕರೆ ಜಮೀನು ಉಳಿಸಿಕೊಳ್ಳವುದಕ್ಕೆ 10

ಸಾವಿರ ರೂಪಾಯಿ ಖರ್ಚುಮಾಡಿ ಉಳಿಸಿಕೊಳ್ಳಬೇಕು ಎಂದರೆ ಅದು ಮಾಡಬೇಕಾದ ಕಾರ್ಯವಲ್ಲ. ಎಂಟು ವರ್ಷ, ಹತ್ತು ವರ್ಷಕ್ಕೆ ಒಂದು ಸಾರಿ ಮಳೆ ಬಂದು ಮನೆಗಳು ಮುಳುಗುತ್ತವೆ ಎಂದರೆ ಆ ಮನೆಗಳನ್ನು ಉಳಿಸುವುದಕ್ಕೆ 30 ಸಾವಿರ ರೂಪಾಯಿ ಖರ್ಚುಮಾಡಿ, ಏನೇ ಆದರೂ ಅವನ್ನು ರಕ್ಷಣೆ ಮಾಡತಕ್ಕ ಕಾರ್ಯ ಕೈಕೊಳ್ಳಿ ಎನ್ನುವ ನಲಹೆಗೆ ಬದಲಾಗಿ ಆ ಹತ್ತಾರು ಮನೆಗಳನ್ನು ಬೇರೆಕಡೆ ಕಟ್ಟಿಕೊಳ್ಳಿ ಎನ್ನುವುದು ಒಳ್ಳೆಯದು. ಹೀಗೆ ಎರಡರಲ್ಲೂ ಕೆಲವು ಸ್ನೇಹಿತರು ಉತ್ಪ್ರೇಕ್ಷೆಯಿಂದ ಮಾತನಾಡಿದ್ದಾರೆ. ಒಟ್ಟಿನಲ್ಲಿ ನದನ್ಯರು ಮಾಡಿರತಕ್ಕ ನಲಹೆ ಸರ್ಕಾರದ ಪರ್ಯಾಲೋಚನೆಗೆ ಅರ್ಹವಾಗಿದೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ.

ಈ ವಿಷಯದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದ ವಿರೋಧಪಕ್ಷದ ನಾಯಕರು ಶ್ರೀಮಾನ್ ಈಶ್ವರಪ್ಪ ಅವರು ನನ್ನ ಮಿತ್ರರು. ಅವರು ಹೇಳಿದಂಥ ವಿಷಯಗಳನ್ನು ಗುರುತು ಹಾಕಿಕೊಂಡಿದ್ದೇನೆ. 15 ವಿಷಯಗಳನ್ನು ಕುರಿತು ಪ್ರಸ್ತಾಪಿಸಿ ಟೀಕೆ ಮಾಡಿದ್ದಾರೆ. Not taking steps fairly. ಕರ್ತವ್ಯ ನಿರ್ವಹಣೆ ಮಾಡುವುದರಲ್ಲಿ ನಿಧಾನ ಮಾಡಲೇ ಇಲ್ಲ. ಮರದ ಮೇಲೆ ನಾಲ್ಕು ದಿನ ಪರದೇಶಿಗಳ ಹಾಗೆ ಜನ ಇದ್ದರು, ರಕ್ಷಣೆ ಮಾಡಲಿಲ್ಲ; ತಿಂಗಳಾದ ಮೇಲೆ ಸಹಾಯ ಮಾಡುತ್ತಾ ಇದ್ದೀರಿ; ನಿಬಂಧನೆಗಳನ್ನು ಸ್ವಲ್ಪ ಉದಾರ ದೃಷ್ಟಿಯಿಂದ ನೋಡಿದಾಕ್ಷಣಕ್ಕೇ ಏನು ಪ್ರಯೋಜನ! ನೀವು ಮಾಡಿರತಕ್ಕ ಆಂದಾಜೆಲ್ಲಾ ಊಹೆಯ ಮೇಲೆ ಮಾಡಿದ್ದೀರಿ; ಎಷ್ಟು ಹಣ ಯಾವ ಅಧಿಕಾರಿಗಳು ಕೊಟ್ಟು ಈ ಕಾರ್ಯಕ್ಕೆ ಉಪಯೋಗಿಸಿದ್ದಾರೆ? ಲೆಕ್ಕ ಕೊಡಿ ಎಂದು ಈ ರೀತಿ 10-15 ವಿಷಯಗಳನ್ನು ಅವರು ಪ್ರಸ್ತಾಪಮಾಡಿದ್ದಾರೆ.

ಶ್ರೀಮಾನ್ ಈಶ್ವರಪ್ಪ ಅವರು ಯಾವ ರೀತಿ ಭಾವನೆ ಮಾಡಿಕೊಂಡಿದ್ದಾರೋ ಆ ರೀತಿ ಭಾವನೆ ಮಾಡತಕ್ಕ ನನ್ನ ಸ್ನೇಹಿತರೆಲ್ಲರಿಗೂ ಒಂದು ಮಾತನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಕಾರ್ಯ ಕ್ರಮವನ್ನು ಕೈಗೊಳ್ಳುವುದರಲ್ಲಿ ಬಹಳ ನಿಧಾನ ಮಾಡಿದ್ದಾರೆ ಎಂದು ಹೇಳುವ ವಿಷಯದಲ್ಲಿ. ಅವರು ವಿಷಯವನ್ನು ತಿಳಿಯದೆ ಹೇಳಿರುವ ಮಾತು ಎಂದು ನನಗೆ ಕಾಣುತ್ತದೆ. ಶ್ರೀಮಾನ್ ಬಾಲಕೃಷ್ಣಗೌಡರು ಮಾತನಾಡುವಾಗ ಶ್ರೀಮಾನ್ ಈಶ್ವರಪ್ಪ ಅವರು ಈ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅದಕ್ಕೋಸ್ಕರ ನಾನು ನನ್ನ ಸ್ನೇಹಿತರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಸಭೆಯಲ್ಲಿ ಚರ್ಚೆಯಾಗುವ ಕಾಲದಲ್ಲಿ ಇದ್ದು ಮಾನ್ಯ ಸದಸ್ಯರೆಲ್ಲರೂ ಏನನ್ನು ಹೇಳುತ್ತಾರೆಂಬುದನ್ನು ಕೇಳಿದರೆ ಅದರಿಂದ ಅನುಕೂಲವಾಗುತ್ತದೆ ಮತ್ತು ಲಾಭವಾಗುತ್ತದೆ. ಈ ಸಾರಿ 48 ಗಂಟೆ ಮೊದಲೇ ಪ್ರವಾಹ ಬರುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಟೆಲಿಗ್ರಾಮ್ ಮತ್ತು ಟೆಲಿಫೋನ್ ಮುಖಾಂತರ ಮುನ್ಸೂಚನೆಯನ್ನು ಕೊಟ್ಟಿದ್ದಾರೆ; ಬರವಣಿಗೆಯ ಮೂಲಕ ತಿಳಿಸಿದ್ದಾರೆ. ವೈರ್‌ಲೆಸ್ ಮುಖಾಂತರ ತಿಳಿಸಿದ್ದಾರೆ. ಈ ರೀತಿ ನಾಲ್ಕು ಸಾಧನಗಳನ್ನು ಉಪಯೋಗಿಸಿಕೊಂಡು 48 ಗಂಟೆ ಮುಂಚಿತವಾಗಿ ಎಲ್ಲೆಲ್ಲಿ ಪ್ರವಾಹ ಬರಬಹುದೋ ಅಂಥಾ ಗ್ರಾಮಗಳಿಗೆಲ್ಲಾ ತಿಳಿವಳಿಕೆಯನ್ನು ಕೊಟ್ಟಿದ್ದಾರೆ. ದುರದೃಷ್ಟವಶಾತ್ ಶ್ರೀರಂಗಪಟ್ಟಣದಲ್ಲಿ ಮಾತ್ರ ಮುನ್ಸೂಚನೆ ಕಿವಿಗೆ ಬೀಳದೆಯೋ ಏನೋ ಬೆಳಗ್ಗೆ ಎದ್ದು ನದಿಖುಲ್ಲಿ ಸ್ನಾನ ಮಾಡುವುದಕ್ಕೆ ಹೋಗಿ ಒಬ್ಬಿಬ್ಬರು ಕೊಚ್ಚಿಹೋದರು. ಇನ್ನು ಬಾಕಿ ಯಾವ ಕಡೆಯಲ್ಲಿಯೂ ತಿಳಿವಳಿಕೆ ಇಲ್ಲದೆ ಅನಾಹುತ ನಡೆದಿಲ್ಲ. ಕೆಲವು ಕಡೆ ಜನಗಳು ಮೊಂಡತನದಿಂದ ತಿಳಿವಳಿಕೆಯನ್ನು ಅಲಕ್ಷಿಸಿ ಪ್ರವಾಹದ ತೊಂದರೆಗೆ ಒಳಗಾದರು. ಸರ್ಕಾರದವರು ತಿಳಿವಳಿಕೆಯನ್ನು ಕೊಟ್ಟರೂ ಸಹ ಅನ್ಯಾಯವಾಗಿ ಕೆಲವರು ತೊಂದರೆಗೆ ಒಳಗಾದರಲ್ಲಾ ಎಂದು ಅಂಥವರ ಬಗ್ಗೆ ಸರ್ಕಾರಕ್ಕೆ ಸಂಕಟವಾಗಿದೆ. ಆದರೂ ಸಹ ಕಾರ್ಯ ಕ್ರಮವನ್ನು ಕೈಗೊಳ್ಳುವುದರಲ್ಲಿ ನಿಧಾನ ಮಾಡಿದರು ಎಂದು ಹೇಳುವುದು ಸರಿಯಾದ ಮಾತಲ್ಲ. 48 ಗಂಟೆ ಮುಂಚಿತವಾಗಿ ಎಲ್ಲೆಲ್ಲಿ ಪ್ರವಾಹ ಬರಬಹುದೋ ಅಂಥಾ ಗ್ರಾಮಗಳಿಗೆಲ್ಲಾ ಅಧಿಕಾರಿಗಳು ಮತ್ತು ಖಾಸಗಿಯವರ ಮುಖಾಂತರ ತಿಳಿವಳಿಕೆಯನ್ನು ಕೊಟ್ಟು ಸರ್ಕಾರದವರು ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಸಬ್-ಮರ್ಫ್ ಆಗತಕ್ಕಂಥ ಗ್ರಾಮಗಳು ಯಾವುವು ಇದ್ದುವೋ ಅಂಥಾ ಗ್ರಾಮಗಳಿಂದ ಜನಗಳನ್ನು ಬೇರೆ ಕಡೆ ಹೊರಡಿಸುವ ಏರ್ಪಾಡನ್ನು ಮಾಡಿದ್ದಾರೆ. ಶ್ರೀಮಾನ್ ಈಶ್ವರಪ್ಪ ಅವರಲ್ಲಿ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಪ್ರವಾಹ ಬರುತ್ತದೆ ಎಂದು ವರ್ತಮಾನವನ್ನು ತಿಳಿದುಕೊಂಡು ಸುಮ್ಮನೆ ಕುಳಿತಿದ್ದು, ನಮಗೆ ಗೊತ್ತಿಲ್ಲ ಎಂದು ಹೇಳಿದರೆ ಹೇಗೆ? ಶ್ರೀಮಾನ್ ಈಶ್ವರಪ್ಪ ಅವರು ಹೊಳೆಯ ದಡದಲ್ಲಿ ಇರತಕ್ಕ ವ್ಯಕ್ತಿಗಳು, ಅದರ ಅನುಭವನ್ನು ತಿಳಿದುಕೊಂಡಿರತಕ್ಕವರು. ಪ್ರವಾಹದಿಂದ ತೊಂದರೆಯಾಗಿರತಕ್ಕ ಜನಗಳು ನಾಲ್ಕು ದಿವಸ ಮರದ ಕೆಳಗಡೆ ಇದ್ದರೂ ನಮ್ಮ ಸರ್ಕಾರದವರು ಏನು ಮಾಡುತ್ತಿದ್ದರು ಎಂದು ಬಹಳ ಕಟುವಾಗಿ ಟೀಕೆ ಮಾಡಿದರು.

ಅವರು ಮಾಡಿರತಕ್ಕ ಟೀಕೆ ಬರಿಯ ಟೀಕೆಯಾಗುತ್ತಪೆಯೇ ಹೊರತು ಮತ್ತೇನೂ ಇಲ್ಲ. ಮೈದಾನ ಸೀಮೆಯಲ್ಲಿದ್ದವರು ಅವರು ಹೇಳತಕ್ಕ ಮಾತು ನಿಜ ಎಂದು ತಿಳಿದುಕೊಳ್ಳಬಹುದು. ಶ್ರೀಮಾನ್ ಈಶ್ವರಪ್ಪ ಅವರು ಏತಕ್ಕೆ ಹಾಗೆ ಹೇಳಿದರೋ ನನಗೆ ಗೊತ್ತಿಲ್ಲ.

Sri M. P. ESWARAPPA.—It is not fair on the part of the Hon'ble Minister. We are also equally responsible, even more anxious than himself to go to the rescue of these people and we have done what best we can. The way in which he talks is very bad.

ಶ್ರೀ ಎಚ್. ಕೆ. ವೀರಣ್ಣಗೌಡ.—ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳದೆ ಸುಮ್ಮನೆ ಮಾತನಾಡುವುದು ಸರಿಯಲ್ಲ. ಎರಡು ಹೊಳೆಗಳ ಮಧ್ಯದಲ್ಲಿರತಕ್ಕ ದ್ವೀಪ ಅಲ್ಲಿ ಒಂದು ಆಳುದ್ದ ನೀರು ಹರಿಯುತ್ತದೆ. ಜನಗಳು ಮರದ ಮೇಲೆ ಏರಿಕೊಂಡು ಕೂಗಿಕೊಳ್ಳುತ್ತಾರೆ. ಇಂಥಾ ನಂಗತಿಯನ್ನು ಗಮನಕ್ಕೆ ತಂದರೆ ಏನು ಮಾಡಬೇಕು? ಅಂಥಾ ಕಷ್ಟದಲ್ಲಿರತಕ್ಕ ಜನಗಳನ್ನು ರಕ್ಷಣೆ ಮಾಡಬೇಕು ಎಂದು ಆಶೆಯಿದ್ದರೂ ಸಹ ಅಲ್ಲಿಗೆ ಹೇಗೆ ಹೋಗಬೇಕು! ಪಶುಗಳ ಹಾಗೆ ಸುಮ್ಮನೆ ಇದ್ದರು ಎಂದು ಟೀಕೆ ಮಾಡಿದರೆ ಅದು ಏನು ಅರ್ಥ!

ಶ್ರೀ ಎಂ. ಪಿ. ಈಶ್ವರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಹದಿಂದ ತೊಂದರೆಯಾಗಿರತಕ್ಕ ಜನಗಳು ತಮ್ಮ ಸಾಮಾನುಗಳನ್ನು ಬೇರೆ ಕಡೆ ಸಾಗಿಸಲು ಸರ್ಕಾರದವರು ಟ್ರಾನ್ಸ್‌ಪೋರ್ಟ್ ಕೊಟ್ಟಿಲ್ಲ. ಸೊರಬ ತಾಲ್ಲೂಕಿನಲ್ಲಿ 150 ಮನೆ ಇರತಕ್ಕ ಒಂದು ಗ್ರಾಮದಲ್ಲಿ ವರದಾ ನದಿಯ ಪ್ರವಾಹವು ಬರುತ್ತದೆ ಎನ್ನುವುದು ಗೊತ್ತಿಲ್ಲದೆ ಜನಗಳು ದೇವಸ್ಥಾನದಲ್ಲಿ ಭಜನೆ ಮಾಡುತ್ತಾ ಕುಳಿತಿದ್ದರು. ಆಗ ಇದ್ದಕ್ಕಿದ್ದ ಹಾಗೆಯೇ

(ಶ್ರೀ ಎಂ. ಪಿ. ಈಶ್ವರಪ್ಪ)

ಪ್ರವಾಹವು ಬಂದು ಜನಗಳು ಓಡಿಹೋದರು. ವಿಷಯವನ್ನು ತಿಳಿಯದೆ ಹೇಳಿದರು ಎಂದು ಹೇಳುವುದು ತಪ್ಪು. ನಾಕಷ್ಟು ಅಂಕ ಅಂಶಗಳನ್ನು ತಿಳಿದುಕೊಂಡು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ಅವರಿಗೆ ಏನೂ ಗೊತ್ತಿಲ್ಲ; ನುಮ್ಮನೆ ತಮಾಷೆಗೆ ಮಾತನಾಡಿದ್ದಾರೆ ಎಂದು ಭಾವಿಸಿಕೊಂಡಿದ್ದರೆ ಅದು ತಪ್ಪು ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರವಾಹದಿಂದ ತೊಂದರೆಯಾಗಿ ಕೆಲವುಜನಗಳು ನಾಲ್ಕುದಿನಗಳವರೆಗೆ ಮರದ ಮೇಲೆ ಕುಳಿತುಕೊಂಡಿದ್ದರು; ಅವರನ್ನು ರಕ್ಷಣೆ ಮಾಡಲಿಲ್ಲ ಎಂದು ಶ್ರೀಮಾನ್ ಈಶ್ವರಪ್ಪನವರು ಬಹಳ ಉಗ್ರವಾಗಿ ಟೀಕೆ ಮಾಡಿದ್ದಾರೆ. ಅದು ಸರಿಯಲ್ಲ. ಅಂಥಾ ಸನ್ನಿವೇಶದಲ್ಲಿ ಅವರನ್ನು ರಕ್ಷಣೆ ಮಾಡುವುದು ಮನುಷ್ಯನಿಂದ ಅಸಾಧ್ಯವಾದದ್ದು. ಪ್ರವಾಹ ಇಳಿಯುವುದಕ್ಕಿಂತ ಮೊದಲು ಒಂದು ಕಡೆ ಶ್ರೀ ಅರ್ಧನಾರೀಶ್ವರ ಗೌಡರು, ವೆಂಕಟೇಗೌಡರು ಮತ್ತು ಸರ್ಕಾರಿ ಅಧಿಕಾರಿಗಳು ಬೆಳಗಿನಜಾವ ಎರಡು ಗಂಟೆಯಲ್ಲಿ ಕೊಪ್ಪರಿಗೆ ದೋಣಿಗಳನ್ನು ತೆಗೆದುಕೊಂಡು ಹೋಗಿ ಜನಗಳನ್ನು ರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಶ್ರೀಮಾನ್ ಈಶ್ವರಪ್ಪನವರು ಟೀಕೆ ಮಾಡುವುದಕ್ಕೆ ಎಂದು ಆ ವಿಚಾರವನ್ನು ಹೇಳಿದ್ದಾರೆಯೇ ಹೊರತು ಬೇರೆ ಅಲ್ಲ. ಎಡಕಾರಿ ಎಂಬ ಗ್ರಾಮವು ಸಬ್ ಮರ್ಜ್ ಏರಿಯಾದಲ್ಲಿದೆ. ಅವರಿಗೆ 48 ಗಂಟೆ ಮುಂಚಿತವಾಗಿ ಪ್ರವಾಹ ಬರುತ್ತದೆ ಎಂದು ವರ್ತಮಾನವನ್ನು ತಿಳಿಸಿದರೂ ಕೂಡ ಅಲ್ಲಿನ ಜನಗಳು ನಮಗೆ ಹಿಂದಿನ ಅನುಭವ ಇದೆ, 1924ನೆಯ ಇನವಿಯಲ್ಲಿ ಪ್ರವಾಹ ಬಂದಾಗ ನಮಗೆ ಏನೂ ತೊಂದರೆಯಾಗಲಿಲ್ಲ, ಎಂದು ಧೈರ್ಯವಾಗಿ ಅಲ್ಲಿಯೇ ಇದ್ದರು. ಆಮೇಲೆ ಪ್ರವಾಹ ಬಂದು ಕೆಲವರು ತೊಂದರೆಗೀಡಾದರು. ಹೀಗಿದ್ದರೂ ಶ್ರೀಮಾನ್ ಈಶ್ವರಪ್ಪನವರು ಹೇಳಿದಂಥ ಮಾತು ಸರಿಯಾದ್ದಲ್ಲ. ಅವರು ಮೊದಲು ಹೇಳಿದಂಥ ಘಟನೆಯೇ ಬೇರೆ, ಈಗ ಹೇಳಿದಂಥ ವಿಷಯವೇ ಬೇರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನಾಲ್ಕುದಿನಗಳು ಪಶುಗಳಂತೆ ನುಮ್ಮನೆ ಇದ್ದರು ಎಂದು ಹೇಳಿದ್ದಾರೆ. Government have failed to do their duty ಎಂದು ಹೇಳಿದ್ದಾರೆ. 48 ಗಂಟೆ ಮೊದಲೇ ಪ್ರವಾಹ ಬರುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಟೆಲಿಗ್ರಾಮ್ ಮೂಲಕ ಟೆಲಿಫೋರ್ಟ್ ಮುಖಾಂತರ ಜನಗಳಿಗೆ ಮುನ್ಸೂಚನೆ ಕೊಟ್ಟು ತಿಳಿಸಿದ್ದರೂ ಜನಗಳಿಗೆ ಮುಂಚಿತವಾಗಿ ತಿಳಿವಳಿಕೆ ಕೊಡಲಿಲ್ಲ ಎಂದು ಹೇಳಿದರೆ ಅದು ಏನು ಅರ್ಥ! ಯಾವುದೇ ಆಗಲಿ ವಿಷಯವನ್ನು ತಿಳಿದುಕೊಂಡು ಹೇಳಬೇಕು. ಶ್ರೀಮಾನ್ ಈಶ್ವರಪ್ಪನವರು ಹೇಳಬಹುದು, ಅವರು ತಮಾಷೆಗೆ ಮಾತನಾಡುತ್ತಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ ಎಂದು. ನಾನು ಆ ರೀತಿ ಹೇಳುತ್ತಿಲ್ಲ. ಅವರು ಈ ಸಮಯವನ್ನು ಉಪಯೋಗಿಸಿಕೊಂಡು ಚುನಾವಣೆಯ ವರ್ಷದಲ್ಲಿ ಸರ್ಕಾರದ ಮೇಲೆ ಅಪಪ್ರಚಾರ ಮಾಡಲು ಈ ರೀತಿ ಮಾತನಾಡುತ್ತಿದ್ದಾರೆ.

Sri M. P. ESWARAPPA.—He may say whatever he feels but he cannot insinuate; that is very bad. I have been observing since a very long time that not only regarding my speech but also regarding the speech of others he is insinuating; it will spoil the whole atmosphere of this House and the dignity of this House. Let him have some restraint and let him not insinuate. It is not proper. He is quite a senior Parliamentarian and he should know better.

I should make it clear at this juncture that neither myself nor my party is so mean as to exploit the distress conditions prevailing in the State for political propaganda. We have been very fair and we continue to be fair. If the Hon'ble Minister expresses any adverse opinion about us, it only reflects the mind of the Minister and his party. He seems to be more interested in elections and his party is very busy fighting elections in Gulbarga.

Sri H.K. VEERANNA GOWDH.—I am glad he said so. It is fairly apparent. If he can make use of this occasion to blackmail the Government and do some propaganda, I have no objection, because I stand on firm ground. I definitely know what the Government has done and is doing.

ಅನಂತರ, ಶ್ರೀಮಾನ್ ಈಶ್ವರಪ್ಪನವರು ಒಂದು ತಿಂಗಳಾದಮೇಲೆ ಸಹಾಯಕ್ಕೆ ಬಂದರು ಎಂದು ಹೇಳಿದರು. ಅನಾಹುತವಾಗಿ 20-25 ದಿವಸಗಳಾಗಿವೆ, ಒಂದು ತಿಂಗಳಾಗಿಲ್ಲ. ತೊಂದರೆಯಾದ ಮೇಲೆ 48 ಗಂಟೆಗಳಿಗಿಂತ ಮುಂಚಿತವಾಗಿಯೇ ಕಾರ್ಯಕ್ರಮವನ್ನು ಕೈಗೊಂಡಿದೆ, ಒಂದು ತಿಂಗಳ ಮೇಲಲ್ಲ. ಆದಷ್ಟು ಶೀಘ್ರವಾಗಿ ಸಹಾಯ ನೀಡಿದೆ. ಮುಂಜಾಗ್ರತೆ ಕಾರ್ಯಕ್ರಮ ಸಹ ಕೈಗೊಂಡಿದೆ. ತೊಂದರೆಗೊಳಗಾಗಿರುವವರನ್ನು ಕರೆದುಕೊಂಡು ಬರುವಾಗಲೇ ಉಪವಾನವಿದ್ದವರಿಗೆ ದೋಣಿಯಲ್ಲೇ ಬಿಸಿನೀರು, ರೊಟ್ಟಿ ಕೊಟ್ಟು ನಮಾಧಾನ ಮಾಡಿ ಆ ಮೇಲೆ 2-3 ಗಂಟೆ ರಾತ್ರಿಯಲ್ಲಿ ಕರೆತಂದು ದೇವಸ್ಥಾನ ಮತ್ತು ಶಾಲೆಗಳಲ್ಲಿ ಸ್ಥಳ ಮಾಡಿಕೊಟ್ಟು ಬಟ್ಟೆ ಒದಗಿಸಿ ಅನುಕೂಲ ಮಾಡಲಾಗಿದೆ. ಒಂದು ತಿಂಗಳ ಮೇಲೆ ಸಹಾಯ ನೀಡಿದ್ದಾರೆಂದು ಹೇಳುವುದು ಉತ್ಪ್ರೇಕ್ಷೆಯ ಮಾತು; ಜನರಿಗೇ ಅರ್ಥವಾಗುತ್ತದೆ. ಅಧಿಕಾರಿಗಳ ಸಮೇತ ಜನರ ಮುಖಂಡರು ಅನಾಹುತವಾಗಿರುವ ಸ್ಥಳಗಳಿಗೆ ಹೋಗಿ ನೊಂದವರಿಗೆ ಉಪಚಾರ ಮಾಡಿದ್ದಾರೆ. ಸರ್ಕಾರ ಮತ್ತು ಖಾಸಗಿಯವರು ಸಮಾಚಾರ ತಿಳಿದ ತಕ್ಷಣ ಒಂದು ಗಂಟೆಯೊಳಗಾಗಿ ನಿಧಾನ ಮಾಡದೆ ಸಹಾಯ ಮಾಡಿರುವಾಗ ಒಂದು ತಿಂಗಳ ಮೇಲೆ ಮಾಡಿದ್ದಾರೆ ಎಂದು ಹೇಳುವುದು ಉತ್ಪ್ರೇಕ್ಷೆಯ ಮಾತು. ಈ ವಿಚಾರದಲ್ಲಿ ಅವರಿಗೆ ಸಮಾಧಾನವಾದರೆ ಅದು ನನ್ನ ದುರದೃಷ್ಟ. "ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಕೆಂಡದಂಥ ಕೋಪ" ಎಂಬ ಗಾದೆಯಿದೆ. ಇರುವ ವಿಚಾರವನ್ನು ಹೇಳಿದಾಗ ಶ್ರೀಮಾನ್ ಈಶ್ವರಪ್ಪನವರಿಗೆ ಕೋಪಬಂದರೆ ವ್ಯಸನವಾಗುತ್ತದೆ.

ಆಮೇಲೆ Estimates are only guess works, ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಪಹಣಿ ಬರೆಯುವಾಗ ಕಣ್ಣಲ್ಲಿ ನೋಡಿ ಅಂದಾಜಿನ ಮೇಲೆ ಚೌಕ

ಇಷ್ಟು ಬೆಳೆಯಾಗಬಹುದೆಂದು ಬರೆಯುತ್ತಾರೆ. ಅದೇ ರೀತಿ ನೋಡಿ ಇಷ್ಟು ಲುಕ್ಸಾನಾಗಿರಬಹುದೆಂದು ಊಹೆ ಮಾಡಿ ತಿಳಿಸಬಹುದೇ ವಿನಾ ಅಳತೆ ಮಾಡಿ ಇಷ್ಟೇ ಸರಿ ಎಂದು ಇಷ್ಟು ಶೀಘ್ರವಾಗಿ ಕರಾರು ವಾಕ್ಯಾಗಿ ಹೇಳಲು ಸಾಧ್ಯವಿಲ್ಲ. ಇದು ಟೀಕೆ ಮಾಡಲು ಲಾಯಕ್ಕಾದ ವಿಷಯವಲ್ಲ.

ಎಷ್ಟು ಹಣ ಕೊಟ್ಟಿದ್ದೀರಿ ಎಂದು ಕೇಳಿದರೆ, ಹೇಳುತ್ತೇನೆ. ಕ್ಯಾಷ್ ಕೊಡಬೇಕಾಗಿಲ್ಲ. ಸರ್ಕಾರಿ ಆಜ್ಞೆಯ ಪ್ರಕಾರ ಎಗ್ಸಿಕ್ಯೂಟಿವ್ ಇಂಜಿನಿಯರು, ಸೂಪರಿಂಟೆಂಡಿಂಗ್ ಇಂಜನೀಯರು, ಡಿವಿಜನಲ್ ಕಮಿಷನರು, ಡೆಪ್ಯುಟಿ ಕಮಿಷನರು ಮುಂತಾದವರು ಅವರಿಗಿರುವ ಮಿತಿಯಲ್ಲಿ ನಂದರ್ಭಾನುಸಾರ ಖಜಾನೆಗಳಿಗೆ ಚೆಕ್ ಬರೆದುಕೊಟ್ಟು ಹಣ ಪಡೆಯಬಹುದು, ಹಣ ಮಂಜೂರಾಗಿಲ್ಲ ಎಂದು ಕಾಯಬಾರದು, ಡ್ರಾ ಮಾಡುವುದಕ್ಕೆ ಹಕ್ಕಿದೆ, ಬೇಕಾದಷ್ಟು ಹಣ ಡ್ರಾ ಮಾಡಿ ಖರ್ಚು ಮಾಡಿ ಎಂದು ಹೇಳಿದ್ದೇವೆ.

ಶ್ರೀ ಎಂ. ಪಿ. ಈಶ್ವರಪ್ಪ.—ರವೆನ್ಯೂ ಮಂತ್ರಿಗಳು ಅಸೆಂಬ್ಲಿಯಲ್ಲಿ ಮಾಡಿದ ಭಾಷಣದ ಪ್ರತಿಯ ಎರಡನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ: "In addition to the normal Budget allotment of Rs. 1,70,000 available with the Divisional Commissioners for granting gratuitous relief, a sum of Rs. 35,000 was allotted to Mysore Division and another sum of Rs. 15,000 was allotted to Belgaum Division." ಏಳನೆಯ ಪುಟದಲ್ಲಿ 55 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿರುವುದನ್ನು ತಿಳಿಸಿದ್ದಾರೆ. ಮೇ ನಲ್ಲಿ ಪ್ರವಾಹ ಬಂದು ಹಾನಿಯಾದರೆ 35 ಸಾವಿರ, 15 ಸಾವಿರ ಮತ್ತು 55 ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿರುವುದು ಯಾವಾಗ? ತೀವ್ರತೆ ಮುಗಿದ ಮೇಲೆ ಮುಂಜಾಗ್ರತೆ ವಹಿಸಿರುವುದು ಸಾಲದು ಎಂದು ನಾನು ಹೇಳುವುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲು ನಾರ್ಮಲ್ ಅಲಾಟ್‌ಮೆಂಟ್ ಮಾಡಿತ್ತು. ಅದಾದ ಮೇಲೆ ಬೇರೆ ಕೊಟ್ಟಿದೆ. ಸಿಚುಯೇಷನ್ ಅಟ್ ನಾರ್ಮಲ್‌ಆದಾಗ ಮೊದಲು ಒದಗಿಸಿದ್ದುದರ ಜೊತೆಗೆ 35 ಸಾವಿರ ಮತ್ತು 15 ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಅಧಿಕಾರಿಗಳಿಗೆ ಅಗತ್ಯವಾದ ಹಣ ಡ್ರಾ ಮಾಡಿ ಖರ್ಚುಮಾಡಿ ಲೆಕ್ಕ ಕೊಡಿ ಎಂದು ಹೇಳಿದೆ. ನಂದರ್ಭಾನುಸಾರ ಅಧಿಕಾರಿಗಳಿಗೆ ವೈರ್ ಮೂಲಕ ತಿಳಿಸಿದ್ದಾರೆ, ಬಾಯಿಮಾತಿನಲ್ಲೂ ಹೇಳಿದ್ದಾರೆ. ಅಗತ್ಯವಿರುವಷ್ಟು ಖರ್ಚು ಮಾಡುತ್ತಿದ್ದಾರೆ ಅದಕ್ಕೆ ಅಭ್ಯಂತರವಿಲ್ಲ. ಇಲ್ಲಿಗೆ ಹದಿನೇಳರ ಪೈಕಿ ಏಳು ಟೀಕೆಗಳಿಗೆ ಉತ್ತರ ಕೊಟ್ಟಿದ್ದಾಯಿತು. ರೋಷದೋಷಗಳಿಲ್ಲದಿರುವಾಗ ಟೀಕೆಮಾಡಿ ಉತ್ಪ್ರೇಕ್ಷೆ ಮಾಡುವುದು ಸರಿಯಲ್ಲ. ಒಪ್ಪಲ, ಬಿಡಲ, ಟೀಕೆಗಳಿಗೆ ಉತ್ತರ ಕೊಟ್ಟಿದ್ದೇನೆ. ಮಾಡಿದ ಟೀಕೆ ಅನಾವಶ್ಯಕವಾಗಿತ್ತು; ನ್ಯಾಯವಾದುದಲ್ಲ ಎಂದು ಇನ್ನೊಂದು ಸಲ ಹೇಳಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಅವು ಕಾಲಾತೀತವಾಗಿ ಬಂದ ಸಲಹೆಗಳು ಎಂದು ಹೇಳುತ್ತೇನೆ. ಅವರು ಬೀಜಗಳನ್ನು ಕೊಡಿ ಎಂದು ಹೇಳಿದರು. ಇವನ್ನು ಕೊಟ್ಟು ಎಷ್ಟೋ ದಿವಸವಾಯಿತು. ಅವರು ಟೀಕೆ ಮಾಡುತ್ತಿದ್ದಾರೆ, ಸಂತೋಷ. ಆದರೆ ಅವರು ಸಲಹೆ ಕೊಡುವುದು ಯಾವಾಗ? ಒಂದು ತಿಂಗಳಾದ ಮೇಲೆಯೇ? ಹಾಗೆಯೇ, ಅವರು ಗೊಬ್ಬರ ಕೊಡಿ ಎಂದು ಹೇಳುತ್ತಿದ್ದಾರೆ. ಇದಾಗಲೇ ಕೊಟ್ಟಾಗಿದೆ.

ಶ್ರೀ ಎಂ. ಪಿ. ಈಶ್ವರಪ್ಪ.—ಆರ್ಡರ್ ಕೊಟ್ಟು ಬಿಟ್ಟಿರೆ ರೈತರಿಗೆ ಮುಟ್ಟಿತೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆರ್ಡರೇ ಮುಖ್ಯ. ಅಲ್ಲದೆ ಬೀಜ ಕೊಡುವ ವಿಚಾರ ಹೇಳಿದರಲ್ಲಾ ಕೆಲವರಿಗೆ ಈಗ ಬೀಜ ಕೊಟ್ಟರೆ ಏನು ಮಾಡಿಕೊಳ್ಳುತ್ತಾರೆ. ಅದಕ್ಕೆ ಕಾಲ ಆಗಿಬಿಡಲಿಲ್ಲವೇ. ಈ ಅಂಶವನ್ನೂ ಆಲೋಚನೆಮಾಡಿ, ಸಾಮಾನ್ಯ ಬಿತ್ತನೆ ಕೊಟ್ಟರೆ, ಅದು ಮೊಳೆತು, ನಾಟಿಮಾಡಿ ಕೊಯ್ಲು ಆಗಲು ನಾಲ್ಕುವರೆ ತಿಂಗಳು ಬೇಕಾಗುತ್ತದೆಂದು ತಿಳಿದು, ಚೈನಾ ಬಿತ್ತನೆ—ಇದು ಮೂರೂವರೆ ತಿಂಗಳಿಗೇ ಫಸಲಿಗೆ ಬರುತ್ತದೆ—ಅದನ್ನು ತರಿಸಿಕೊಟ್ಟಿದ್ದೇವೆ. ಹಾಗಿದ್ದರೂ ಬೆಳೆ ಮಾಡುವುದಕ್ಕೆ ಕಷ್ಟಗಳಿವೆ. ಕೆಲವು ಕಡೆ ಮರಳು ತುಂಬಿರುತ್ತದೆ; ಇನ್ನು ಕೆಲವು ಕಡೆ ಮೆಕ್ಕಲುಮಣ್ಣು ತುಂಬಿರುತ್ತದೆ. ಅಂಥ ಕಡೆ ಬೀಜ ಕೊಟ್ಟರೆ ತಾನೆ ಏನು ಪ್ರಯೋಜನ? ಇದನ್ನೂ ನಾವು ನೋಡಬೇಕು. ಇವುಗಳನ್ನೆಲ್ಲಾ ಗಮನದಲ್ಲಿಟ್ಟು ಕೊಂಡು, ಯಾರುಯಾರಿಗೆ ಬೇಕೋ ಅವರಿಗೆಲ್ಲಾ ಕೊಡುವಂತೆ ಮಾಡಿ ಚೈನಾ ಜಾತಿಯ ಬೀಜದ ಬಿತ್ತನೆಯನ್ನು ಎಲ್ಲಾ ಡಿಪೋಗಳಿಂದಲೂ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಬಡ್ಡಿಯಿಲ್ಲದೆ ಸಾಲವನ್ನು ಕೊಡುವ ಏರ್ಪಾಡು ಮಾಡಿದ್ದೇವೆ. ಇವೆಲ್ಲಾ ಶ್ರೀ ಈಶ್ವರಪ್ಪನವರು ಹೇಳುವುದಕ್ಕೆ ಮುಂಚೆಯೇ ಮಾಡಿರುವುದು. 'ಅಪ್ಲಿಕೇಷನ್ ಬರುವುದನ್ನು ಕಾಯಬೇಡಿ, ರೈತರ ಮನೆಯ ಬಾಗಿಲಿಗೆ ಹೋಗಿ ಕೊಡಿ' ಎಂದು ಹೇಳಿದರು. ಆ ರೀತಿ ಕೂಡ ಆಗಲೇ ಹೇಳಿ, ಅಧಿಕಾರಿಗಳು ಟ್ರೆಜರಿಯಿಂದ ಹಣ ತೆಗೆದುಕೊಂಡು ಹೋಗಿ ರೈತರಿಗೆ ಬಟವಾಡೆ ಮಾಡಬೇಕೆಂದು ಹೇಳಿದ್ದೇವೆ ಅರ್ಜಿ ಬರಲೆಂದು ಯಾರೂ ಕುಳಿತಿಲ್ಲವೆಂದು ನಾನು ಮಾನ್ಯ ಶ್ರೀ ಈಶ್ವರಪ್ಪನವರಿಗೆ ಹೇಳಬಯಸುತ್ತೇನೆ. ಆಮೇಲೆ ವಿಶೇಷ ಸಿಬ್ಬಂದಿಯ ನೇಮಕಮಾಡುವುದರಿಂದ ಏನು ಪ್ರಯೋಜನ ಎಂದು ಕೇಳಿದರು. ಕೆಲಸಮಾಡುವುದಕ್ಕೆ ಹೆಚ್ಚಿಗೆ ಸಿಬ್ಬಂದಿಯಿಲ್ಲದಿದ್ದರೆ ಹೇಗೆ ಸಾಧ್ಯ? ಮತ್ತೊಂದೇನೆಂದರೆ, 'Money provided for loan is not adequate' ಎಂದು ಹೇಳಿದರು. ಎಷ್ಟು ಅಗತ್ಯವೋ ಅಷ್ಟೂ ಕೊಡುತ್ತೇವೆ. ಪಬ್ಲಿಕ್ ಮತ್ತು ಪ್ರೈವೇಟ್ ಆಸ್ತಿಗಳಿಗೆ ಆಗಿರುವ ನಷ್ಟ ಇನ್ನೂ ಹೆಚ್ಚಾಗಿದೆಯೆಂದು ಹೇಳಿದರು; ಇರಬಹುದು. ಈಗ ಮಾಡಿರುವುದು ಒಂದು ಅಂದಾಜಿನ ಮೇಲೆ. ಅದು ಕರಾರುವಾಕು ಎಂದು ನಾವೂ ಹೇಳಲಲ್ಲ, ಮುಂದೆ ನಿಖರವಾಗಿ ತಿಳಿಯಬೇಕಾಗಿದೆ.

ಇಷ್ಟು ಮಾನ್ಯ ಶ್ರೀ ಈಶ್ವರಪ್ಪನವರು ಹೇಳಿದ ಮಾತುಗಳಿಗಾಯಿತು. ಇನ್ನು ಬಾಕಿ ಸ್ನೇಹಿತರುಗಳು ಹೇಳಿದ ವಿಷಯಗಳಿಗೆ ಬರುತ್ತೇನೆ. ಇವರು ಮಾಡಿದ್ದು ಟೀಕೆಯೆಂದರೂ ಸಲಹೆಯೆ ರೂಪದಲ್ಲಿ ಮಾಡಿದ್ದು; ಅದನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಒಂದು ಕೂಡಲೇ ಮಾಡಬೇಕಾದ ಕೆಲಸ; ಇನ್ನೊಂದು ಖಾಯಂಆಗಿ ಏರ್ಪಡಿಸಬೇಕಾದ ಕೆಲಸ. ಇವೆರಡು ರೀತಿಯ ಸಲಹೆಗಳನ್ನೂ ಸರ್ಕಾರದವರು ತೀವ್ರವಾಗಿ ಆಲೋಚನೆಮಾಡಿ ಮಾಡಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ಸರ್ಕಾರದವರು ಖಂಡಿತ ಕೈಗೊಳ್ಳುತ್ತಾರೆಂದು ನಾನು ಒಂದು ಮಾತಿನಲ್ಲಿ ಹೇಳಿದರೆ ಸಾಕೆಂದು ಕಾಣುತ್ತದೆ.

ಮುಖ್ಯವಾಗಿ, ಈಗ ಮಾಡಿರುವ ತಾತ್ಕಾಲಿಕ ಸಹಾಯವೆಂದರೆ, ನಗದು ಹಣ ಕೊಟ್ಟಿದೆ. ಆ ಜನರನ್ನು ಬೇರೆ ಕಡೆಗೆ ಕರೆದು, ಕೊಂಡು ಹೋಗಿ ಬೇರೆ ವಸತಿ ಏರ್ಪಡಿಸಿದೆ. ಕೆಲವು ಕಡೆ ಜಪ್ತಿರವನ್ನು ಉದ್ದಕ್ಕೆ 200–300 ಅಡಿ

(ಶ್ರೀ ಎಚ್. ಕೆ. ವೀರಣ್ಣಗೌಡ)

ಹಾಕಿಸಿಕೊಟ್ಟು,, ಮೇಲೆ ಹುಲ್ಲುಹೊದಿಸಿ ಮಳೆ ಬಾರದಂತೆ ಮಾಡಿದ್ದೇವೆ. ಹೆಚ್ಚಿಗೆ ಮಳೆ ಬಂದರೆ ಜಿಂಕ್‌ಷೀಟ್ ಉಪಯೋಗಿಸಿಕೊಳ್ಳುವಂತೆ, ಮೊನ್ನೆ ತಾನೆ ಆರುರಾರಿ ಭರ್ತಿ ಎಂದರೆ ಸುಮಾರು 5,000 ಷೀಟುಗಳನ್ನು ಹಾವೇರಿ ಕಡೆಗೆ ಕಳುಹಿಸಿ ಕೊಟ್ಟಿದೆ. ಇಷ್ಟೆಲ್ಲಾ ಮಾಡಿದ್ದರೂ ಎಲ್ಲರಿಗೂ ವಸತಿಯ ಏರ್ಪಾಡು ಸಮರ್ಪಕವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಎಷ್ಟೋ ಜನ ಇನ್ನೂ ಅಲ್ಲಲ್ಲೇ ಬಚ್ಚಿ ಬರೆಗಳನ್ನು ಕಟ್ಟಿಕೊಂಡು, ಅಲ್ಲೇ ಒಲೆ ಇಟ್ಟುಕೊಂಡಿರುತ್ತಾರೆ. ಇನ್ನು ಆಹಾರದ ಸರಬರಾಯಿಯ ವಿಷಯವನ್ನು ಹೇಳುವುದಾದರೆ; 10 ದಿವಸಗಳಿಗೆ ಕಾಳು ಕೊಡಬೇಕೆಂದಿದ್ದುದನ್ನು ಹೆಚ್ಚಿಸಿ 15 ದಿನಗಳಿಗೆ ಹೆಚ್ಚಿಸಿದೆ. ಇದರ ಜೊತೆಗೆ ಸ್ಥಳದ ಜನರು ಬೇರೆ ಅಲ್ಪ ಸ್ವಲ್ಪ ಸಹಾಯವನ್ನು ಮಾಡಿದ್ದಾರೆ. ಒಟ್ಟಿನಲ್ಲಿ ಮೂರು ವಾರಗಳಿಗೆ ಸಾಕಾಗುವಷ್ಟು ಆಹಾರ ಪ್ರತಿಯೊಬ್ಬರಲ್ಲೂ ಇದೆ. ಸ್ಥಳವಸತಿ ಕೊಡುವ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದನ್ನು ಬಿಚ್ಚಿ. ನಮ್ಮಲ್ಲಿ ರಿಸೆಪ್ಷನ್ ಕಮಿಟಿಯವರಲ್ಲಿ 700 ಟೆಂಟುಗಳಿದ್ದುವು. ಅವನ್ನು ಅಗ್ಗವಾಗಿ ಕೊಂಡು ಕೊಂಡು ಒದಗಿಸಿದ್ದೇವೆ. ಜೊತೆಗೆ ಮೀಟರಿಯವರಿಂದಲೂ ಕೆಲವು ಟೆಂಟುಗಳನ್ನು ತರಿಸಿ ಕೊಟ್ಟಿದ್ದೇವೆ. ಅದುದರಿಂದ ಜನತೆಗೆ ಅಷ್ಟು ತೊಂದರೆಯಾಗಲಾರದು. ಆಹಾರ ಪದಾರ್ಥಗಳ ವಿಷಯದಲ್ಲಿಯೂ ಹಾಗೆಯೇ. ಇದನ್ನೆಲ್ಲಾ ವಿವರವಾಗಿ ಸ್ಟೇಟ್‌ಮೆಂಟ್‌ನಲ್ಲಿ ಕೊಡುವುದಕ್ಕಾಗುವುದಿಲ್ಲ. ಹೇಳಿದ ಮಾತ್ರಕ್ಕೇ ಏನೂ ಮಾಡಿಲ್ಲವೆಂದು ಅಪಾದನೆ ಮಾಡುವುದು ಸರಿಯಲ್ಲ. ಎಷ್ಟೋ ವಿಷಯಗಳನ್ನು ಹೇಳಿಕೆಯಲ್ಲಿ ಅಡಕ ಮಾಡುವುದಕ್ಕಾಗುವುದಿಲ್ಲ; ಉದಾಹರಣೆಗೆ Gruel Centres ಎಂದು ಮಾಡಿ ರೊಟ್ಟಿ, ಪಿಟ್ಟು ಅನ್ನ ಬೇಯಿಸಿ ಕೊಡುವ ವ್ಯವಸ್ಥೆಮಾಡಿದೆ. ಅಲ್ಲದೆ ಮೆಡಿಕಲ್ ಆಫೀಸರು ಮತ್ತು ಹೆಲ್ತ್ ಆಫೀಸರನ್ನು ಆ ಪ್ರದೇಶಕ್ಕೆ ಹೋಗಬೇಕೆಂದು ಹೇಳಿ, ಆ ಪ್ರದೇಶವನ್ನು ಹೇಗೆ ಸ್ವಚ್ಛ ವಾಗಿಟ್ಟುಕೊಳ್ಳಬೇಕೆಂದು, ನೋಡಿಕೊಳ್ಳಬೇಕೆಂದು ಹೇಳಿದ್ದೇವೆ. ಏಕೆಂದರೆ, ಆ ಜನರಿಗೆ ಶುಚಿತ್ವದ ವಿವೇಚನೆಯಿಲ್ಲದೆ ಅಲ್ಲೆ ನುತ್ತ ಮುತ್ತಲಲ್ಲಿ ದೇಹ ಬಾಧೆಯನ್ನು ತೀರಿಸಿಕೊಳ್ಳುತ್ತಾರೆ. ಇದರಿಂದಾಗಿ ಆ ಪ್ರದೇಶವೆಲ್ಲಾ ಪಾಪನೆಯಾಗಿ ನಾನಾ ರೋಗಗಳಿಗೆ ಕಾರಣವಾಗಿರುತ್ತದೆ; ಕಾಲರಾ ಮುಂತಾದ ರೋಗ ಬರಬಹುದು ಎಂದು ಹೇಳಿ ಸ್ಯಾನಿಟರಿ ಇನ್‌ಸ್ಪೆಕ್ಟರನ್ನು ಕಳುಹಿಸಿ ಕೊಟ್ಟಿದ್ದೇವೆ. ಈ ಪ್ರಕಾರ ಸರ್ಕಾರಿ ಅಧಿಕಾರಿಗಳಿಗೆ ಪ್ರತಿಯೊಂದು ವಿಷಯದಲ್ಲೂ ವಿವರವಾಗಿ ತಿಳಿವಳಿಕೆಯನ್ನು ಕೊಟ್ಟಿದ್ದೇವೆ. ಆ ಪ್ರದೇಶದಲ್ಲಿ ಖಾಯಂ ಆಗಿ ಒಬ್ಬಿಬ್ಬರು ಡಾಕ್ಟರು ಕ್ಯಾಂಪ್‌ಮಾಡುವ ಏರ್ಪಾಡು ಮಾಡಿದೆ.

ಶ್ರೀ ಟಿ. ಎಚ್. ಕೆಂಪಹೊನ್ನಯ್ಯ:—Travelling Vans ಇಟ್ಟು ಅವುಗಳ ಮೂಲಕ ಸ್ಥಳಕ್ಕೆ ಹೋಗಿ ಔಷಧಿಯನ್ನು ಕೊಡುವ ಹಾಗೆ ಏರ್ಪಾಡು ಮಾಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೂ ಒಳ್ಳೆಯದೇ. ಅದಕ್ಕೂ ವ್ಯವಸ್ಥೆಮಾಡುತ್ತಿದ್ದಾರೆ. ಇನ್ನೂ ಏನಾದರೂ ಕೊರತೆಯಿದ್ದರೆ, ಈಗ ನವ್ಯದಲ್ಲೇ ಎಲ್ಲಾ ಸಚಿವರುಗಳು ಏರ್ಪಡಿಕೊಂಸಿಡಿರುವ ಟೂರ್ ಪ್ರೋಗ್ರಾಂ ಪ್ರಕಾರ ಅಲ್ಲಿಗೆ ಹೋದಾಗ ತಕ್ಕ ವ್ಯವಸ್ಥೆ ಮಾಡುತ್ತಾರೆ. ಆ ಸಂದರ್ಭದಲ್ಲಿ ತಾವು ಹೇಳಿದ್ದನ್ನೂ ಅವರ ಗಮನಕ್ಕೆ ತಂದು ತಕ್ಕ ಏರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಸತಿ, ಊಟ ಆದಮೇಲೆ ಇನ್ನು ಜಾನು ಕೊಡುವ ವಿಷಯ?

Sri T. N. KEMPAHONNIAH.—What about fodder for cattle.

ಶ್ರೀ ಎಚ್. ಕೆ. ವೀರಣ್ಣಗೌಡ.—ದನಗಳ ಮೇವಿನ ಪ್ರಶ್ನೆ ಬಹಳ ಕಷ್ಟದ್ದು. ಇರುವ ಅಲ್ಪಸ್ವಲ್ಪ ಹುಲ್ಲು ಕೊಳೆತು ಹೋಗಿದ್ದು, ಅದನ್ನು ದನ ತಿನ್ನುವುದಿಲ್ಲ. ಅದುದರಿಂದ ದನಗಳನ್ನು ಅಲ್ಲಲ್ಲೇ ಮೈದಾನದಲ್ಲಿ ಕಾಲಾಡಿಸಿ ಕರೆದುಕೊಂಡು ಬರಬೇಕಾಗಿದೆ.

ಮೂರನೆಯದಾಗಿ, ಹಳ್ಳದಲ್ಲಿರುವ ಜನರನ್ನು ಎತ್ತರದ ಜಾಗಕ್ಕೆ ಕರೆದುಕೊಂಡು ಹೋಗಬೇಕೆಂದು ಹೇಳಿದ್ದಾರೆ. ನಿನ್ನೆಯದಿವಸ ತಾನೆ ಇದಕ್ಕೆ ಅನುಕೂಲವಾಗುವಂತೆ ಒಂದು ವಿಧೇಯಕ ಪಾಸಾಗಿದೆ. ಆ ಪ್ರಕಾರ ಯಾವ ನಿಧಾನವೂ ಮಾಡದೆ ಜನರನ್ನು ಬೇರೆ ಕಡೆಗೆ ಕಳುಹಿಸಿ ಕೊಡುವ ಏರ್ಪಾಡು ಮಾಡುವುದಕ್ಕೆ ಸಾಧ್ಯವಿದೆ. ಆದರೆ, ಒಂದು ದುರ್ದೈಷ್ಟವೆಂದರೆ, ಆಗಲೆ ಕೆಲವು ಕಡೆಗಳಲ್ಲಿ ಜನರು ಪಾಪಸು ತಮ್ಮ ಜಾಗಗಳಿಗೆ ಹೋಗುತ್ತಿದ್ದಾರೆ. ಕಾರಣ ವೇನೆಂದರೆ, ಅವರ ಸಾಮಾನುಗಳು, ದನಕರುಗಳು ಅಲ್ಲೇ ಇವೆ. ಆದರೂ ಇದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆ. ಈ ಜನರಿಗೆ ಹೊಸದಾಗಿ ಮನೆಕಟ್ಟಿ ಕೊಳ್ಳುವುದಕ್ಕೆ 300 ರೂಪಾಯಿ ಕೊಡಬೇಕೆಂದು ಮಾಡಿದ್ದೇವೆ. ಎಷ್ಟೋ ಜನರಿಗೆ ಇಷ್ಟು ಬೇಕಾಗಿಲ್ಲ. ಎಷ್ಟೋ ಜನರ ಮನೆಗಳು ಬಿದ್ದು ಹೋಗಿದ್ದರೂ ಅವುಗಳ ಹೆಂಚು, ಗಳ ಸಿಕ್ಕುವಂತಿರುತ್ತವೆ. ಬಾಗಿಲು ಚೌಕಟ್ಟುಗಳು ಸಿಕ್ಕುತ್ತವೆ; ಕಿಟಕಿಗಳು ಸಿಕ್ಕುತ್ತವೆ. ಏನೇನು ಸಿಕ್ಕುತ್ತವೆಯೋ ಅವನ್ನು ತೆಗೆದುಕೊಂಡು ಬಂದು ಕೊಡಲು ವ್ಯವಸ್ಥೆ ಮಾಡಬೇಕು. ಅಲ್ಲದೆ ಮುಳುಗಡೆಯ ಪ್ರದೇಶಗಳವರಿಗೆ ಅವರ ಸಾಮಾನುಗಳನ್ನು ಹೊಸ ಜಾಗಕ್ಕೆ ಚಾರ್ಜಿಲ್ಲದೆ ರಾರಿಗಳ ಮೂಲಕ ಸಾಗಿಸಿಕೊಂಡು ಹೋಗಿ ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ; ಕಲನ ನಡೆಯುತ್ತಿದೆ. ಆ ಸಾಮಾನುಗಳನ್ನು ಸಾಗಿಸುವವರಿಗೆ ಯಾರಾದರೂ ಕದ್ದುಕೊಂಡು ಹೋಗುತ್ತಾರೋ ಏನೋ ಎಂದು ಆ ಜಾಗಗಳಿಗೆ ಹೋಗಿ ಆ ಜನ ಮಲಗುತ್ತಾರೆ. 'ಬೇಡವೆಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಪೋಲೀಸರ ಕಾವಲು ಹಾಕಿದ್ದೇವೆ; ಆದರೂ ಕೂಡ ಅಲ್ಲೇ ಹೋಗಿ ಮಲಗುತ್ತಿದ್ದಾರೆ. ಅಲ್ಲಿಗೆ ಹೋಗಬಾರದೆಂದು ಹೇಳಿದ್ದೇವೆ; ಆದರೂ ಕೇಳುವುದಿಲ್ಲ. ಕೆಲವರು ದೊಡ್ಡ ದೊಡ್ಡ ಮಹಡಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅಂಥವರು ಇತರರನ್ನು 'ನೀವು ಬೇಕಾದರೆ ನಮ್ಮ ಮನೆಯಲ್ಲಿರಿ, ಊರು ಬಿಟ್ಟು ಹೋಗಬೇಡಿ' ಎಂದು ಹೇಳುತ್ತಿದ್ದಾರೆ. ಹೀಗೆ ಅವರು ಹೇಳುವುದು ತಮ್ಮ ರಕ್ಷಣೆಗಾಗಿ ಜನರಿರಲಿ ಎಂಬ ಉದ್ದೇಶದಿಂದ. ಈ ವಿಚಾರದಲ್ಲಿ ಸರ್ಕಾರ ಕಠಿಣವಾದ ಕಾರ್ಯಕ್ರಮವನ್ನು ಕೈಕೊಂಡು, ಎಲ್ಲರೂ ಕಡ್ಡಾಯವಾಗಿ ಬೇರೆ ಕಡೆಗೆ ಹೋಗಬೇಕೆಂದು ಹೇಳಿ ಅವರಿಗೆ ಬೇರೆ ಸ್ಥಳ ಒದಗಿಸಲು ಅನುಕೂಲ ಮಾಡುತ್ತಾರೆ.

ಒಂದು ಗ್ರಾಮದ ಹತ್ತಿರದ ಕಾಡಿನಲ್ಲಿ ವ್ಯವಸಾಯ ಮಾಡಲು ಭೂಮಿಯನ್ನು ಕೊಡಿಸಿ ಎಂದು ಶ್ರೀ ಮಾಬಾಲಕೃಷ್ಣ ಗೌಡರು ಹೇಳಿದರು. ಈ ವಿಚಾರವನ್ನು ಅರಣ್ಯ ಶಾಖೆಯ ಮಂತ್ರಿಗಳಿಗೆ ಹೇಳಿದ್ದೇನೆ. ಸಾಧ್ಯವಾದಷ್ಟು ಬೇಗ ಭೂಮಿಯನ್ನೊದಗಿಸಲು ಸರ್ಕಾರ

ದವರು ಪ್ರಯತ್ನ ಮಾಡುತ್ತಾರೆ. ತಾತ್ಕಾಲಿಕವಾಗಿ ಜನರಿಗೆ ಒದಗಿಸಬಹುದಾದ ಸಹಾಯದ ವಿಚಾರದಲ್ಲಿ ಸರ್ಕಾರದ ಮನೋಭಾವವನ್ನು ತಿಳಿಸಿದ್ದೇನೆ.

ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ.—ಒಂದೊಂದು ಕುಟುಂಬಕ್ಕೆ ಮುನ್ನೂರರಿಂದ ನಾಲ್ಕುನೂರು ರೂಪಾಯಿಗಳವರೆಗೆ ಕಾಡಿನಿಂದ ಪಟಂಬರ ಕೊಳ್ಳಿಗಾಲ ಅಥವಾ ಕೊಡಬಹುದೆಂದು ಆಜ್ಞೆ ಮಾಡಿದ್ದೀರಿ. ಆ ಮರವನ್ನು ಆದರ ಹತ್ತಿರವಿರುವ ಕಾಡಿನಿಂದ ತೆಗೆದುಕೊಂಡು ಬರಲು ಅವಕಾಶ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣ ಗೌಡ.—ಆ ಜನರನ್ನೇ ಕಾಡಿಗೆ ಬಿಟ್ಟರೆ ಸಿಕ್ಕಾಪಟ್ಟೆ ಆಗಬಹುದು. ಆದ ಕಾರಣ ಸರ್ಕಾರದ ಹಾಗೂ ರೈತರ ಹಿತ ದೃಷ್ಟಿಯಿಂದ ರೈತರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಮರವನ್ನು ಸರಕಾರಿ ಡಿಪೋದಿಂದ ಒದಗಿಸಬೇಕೆಂದು ಮಾಡಿದ್ದೇವೆ. ಅಲ್ಲಿ ದೊರೆಯದಿದ್ದರೆ, ಹೆಚ್ಚಿ ಧಾರಣೆಯಲ್ಲಿ ಕೊಂಡು ಒದಗಿಸಬೇಕೆಂದು ಸರ್ಕಾರ ಆಜ್ಞೆ ಮಾಡಿದೆ.

ಮಂತ್ರಿಗಳು ಪ್ರವಾಸ ಹೋಗಿ ಕಷ್ಟಕ್ಕೊಳಗಾದ ಜನರಿಗೆ ಸಹಾಯ ಮಾಡಬೇಕೆಂದು ಶ್ರೀಮಾನ್ ಕೆಂಪಹೊನ್ನಯ್ಯನವರು ಹೇಳಿದ್ದಾರೆ; ಇದು ಒಂದು ಸಂತೋಷದ ವಿಚಾರ. ಹಿಂದೆ ಮಂತ್ರಿಗಳು ಪ್ರವಾಸ ಮಾಡಬಾರದೆಂದು ಹೇಳಿ ಉಗ್ರವಾಗಿ ಟೀಕೆಯನ್ನು ಕೆಲವು ಸದಸ್ಯರು ಮಾಡಿದರು. ಶ್ರೀಪೂರ್ ಅಂಜನಪ್ಪನವರು ವಿಮಾನದಲ್ಲಾದರೂ ಹೋಗಿ ನೋಡಬೇಕೆಂದು ಹೇಳಿದರು.....

ಶ್ರೀ ಜಿ. ಪಿ. ಆಂಜನಪ್ಪ.—ಎಲ್ಲ ಸಂದರ್ಭಗಳಲ್ಲಿಯೂ ಅಲ್ಲ. ಹೀಗೆ ಅಗತ್ಯವಾದಾಗ ಹೋಗಬೇಕು ಎಂದು ಹೇಳಿದೆ.

ಶ್ರೀ ಎಚ್. ಕೆ. ವೀರಣ್ಣ ಗೌಡ.—ಹೇಗಾದರೂ ಪ್ರವಾಸ ಹೋಗಬೇಕೆಂದು ಹೇಳಿದರು. ಮೂರು ದಿನಗಳಲ್ಲಿ ವ್ಯತ್ಯಾಸವಾಗಿದ್ದರೆ ಸಂತೋಷ, ಮುಂದೆ ಏನು ಮಾಡಬೇಕೆಂದು ಯೋಚನೆ ಮಾಡಿ, ಪ್ರವಾಸ ಮಾಡಲು ವ್ಯವಸ್ಥೆ ಮಾಡಿದ್ದೇವೆ, ಹೋಗುತ್ತೇವೆ.

ತಾತ್ಕಾಲಿಕವಾಗಿ ಮಾಡಬೇಕಾದ ಸಹಾಯ, ಕಲ್ಪಿಸಬೇಕಾದ ಸೌಕರ್ಯಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ. ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆ. ಇರುವ ಕಡೆಯೇ ಭೂಮಿಯನ್ನು ಸರಿ ಮಾಡಲು ಸಹಾಯ ಮಾಡಬೇಕು ಎಂದು ಹೇಳಿದರು. ಒಂದು ಎಕರೆಯನ್ನು ಕಾಪಾಡುವುದಕ್ಕೆ ಹತ್ತು ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆದಕಾರಣ ಆ ಜಮೀನನ್ನು ಬಿಟ್ಟು ಬೇರೆ ಕಡೆ ಕೊಡಬೇಕಾಗುತ್ತದೆ. ಇನ್ನೂ ಕೆಲವು ಕಾರಣಗಳೂ ಇವೆ. ಸಿಕ್ಕಾಪಟ್ಟೆ ಕಾಡುಗಳನ್ನು ಕಡಿಯುವುದರಿಂದ ನಷ್ಟವಾಗುತ್ತದೆ, ಮಳೆ ಹೋಗುತ್ತದೆ. ಈ ಕಾರಣದಿಂದ ಕಾಡುಗಳನ್ನು ಕಾಪಾಡಬೇಕು. ಯಾವ ಯಾವ ಕಡೆ ಏನೇನು ಕ್ರಮಗಳನ್ನು ಕೈಕೊಳ್ಳಬೇಕೆಂದು ಸರ್ಕಾರ ನಿಧಾನವಾಗಿ ಯೋಚನೆ ಮಾಡಿ, ತಜ್ಞರ ಅಭಿಪ್ರಾಯವನ್ನು ಪಡೆದು ಕ್ರಮ ಕೈಗೊಳ್ಳುತ್ತದೆ.

ನದಿಗಳ ಕೋರ್ಸ್, ಎಂದರೆ ಹರಿಯುವ ಸ್ಥಳವನ್ನು ಬದಲಾವಣೆ ಮಾಡುವ ವಿಚಾರವಾಗಿ ಹೇಳಿದರು. ನಮ್ಮಲ್ಲಿ ಕೃಷ್ಣ ರಾಜನಾಗರದಲ್ಲಿ ನದಿಯ ಪ್ರವಾಹವನ್ನು ತಡೆಯುವುದಕ್ಕೂ, ನದಿ ಕೊರೆಯುವುದನ್ನು ತಡೆಯುವುದಕ್ಕೂ ಸಂಬಂಧಪಟ್ಟ ಹಾಗೆ ಒಂದು ಸಂಶೋಧನಾಲಯವಿದೆ. ಅಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇದನ್ನು ಪರೀಕ್ಷೆ ಮಾಡಿ ಎಂದು ಹೇಳಬಹುದು ಹೆಚ್ಚು ಅನುಭವ ಪಡೆದಿರುವವರಿರುವ ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ಪಡೆಯಬಹುದು, ಅಲ್ಲಿ ಅನೇಕ ತಜ್ಞರಿದ್ದಾರೆ. ಅಣೆಕಟ್ಟುವುದಲ್ಲದೆ ಯಶಸ್ವಿಯಾಗಿ ನದಿಯ ಪ್ರವಾಹವನ್ನು ತಡೆಯಲು ಏನು ಕ್ರಮ ಕೈಕೊಳ್ಳಬೇಕಾಗುತ್ತದೆಂಬ ಬಗ್ಗೆ ತಜ್ಞರ ಒಂದು ಸಮಿತಿಯನ್ನು ಮಾಡಿ ಏನು ಮಾಡಬೇಕೆಂಬುದನ್ನು ಮುಂದೆ ತೀರ್ಮಾನ ಮಾಡಬೇಕು. ಬಹಳ ಖರ್ಚಾಗುವುದಾದರೆ, ಬೇರೆ ರೀತಿ ಮಾಡಬೇಕು, ವಿಶೇಷ ಹಣ ಖರ್ಚು ಮಾಡಿ ಮಾಡುವುದು ಬುದ್ಧಿವಂತಿಕೆಯಲ್ಲವೆಂದು ಹೇಳುತ್ತೇನೆ.

ಇನ್ನೂ ಕೆಲವು ಸಣ್ಣಪುಟ್ಟ ವಿಚಾರಗಳನ್ನು ಹೇಳಿದ್ದಾರೆ. ಒಬ್ಬ ವ್ಯಕ್ತಿಯನ್ನು ಹೊರಗೆ ಕಂದು ರಕ್ಷಣೆ ಮಾಡಲು ಒಂದು ವಾರ ಬೇಕಾಯಿತೆ? ಎಷ್ಟೋ ಜನ ಈಜುಗಾರರಿದ್ದರು ಎಂದು ಶ್ರೀ ಮಾಮದಾಪೂರ್ ಅವರು ಹೇಳಿದರು. ಅಷ್ಟು ಜನರಿದ್ದರೂ ಕೂಡ ಅವರೂ ಹೆದರಿ, ಎಂಟು ದಿನಗಳಾದ ಮೇಲೆ ಹೋಗಿ ಕರೆದುಕೊಂಡು ಬಂದರು.

ಶ್ರೀ ಚಂಪಾ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮರಳನ್ನು ತೆಗೆಯಬೇಕೆಂದು ಹೇಳಿದರು. ಆದರೆ ಇದಕ್ಕೆ ಖರ್ಚು ಜಾಸ್ತಿಯಾಗುತ್ತದೆ. ಎಷ್ಟು ಮಟ್ಟಿಗೆ ಸಾಧ್ಯವೆಂದು ನೋಡಿಕೊಂಡು ಮಾಡಬೇಕು.

Dr. S. CHAMPA.—Specially in rivers' mouths.

ಶ್ರೀ ಎಚ್. ಕೆ. ವೀರಣ್ಣ ಗೌಡ.—ಒಂದು ತಜ್ಞರ ಸಮಿತಿಯನ್ನು ಏರ್ಪಾಡುಮಾಡಿ, ಅವರ ವಿಮರ್ಶೆ ಗೊಳಪಡಿಸುವುದು ಉತ್ತಮ. ಸರ್ಕಾರದ ಮಟ್ಟದಲ್ಲಿ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಿ ಪ್ರಯತ್ನ ಮಾಡುತ್ತೇವೆಂದು ಸಭೆಗೆ ಹೇಳುತ್ತಿದ್ದೇನೆ.

ಸಹಸ್ರ ಕುಂಭಾಭಿಷೇಕ ಮಾಡಿಸಬೇಕೆಂದು ಕೆಲವು ಸ್ನೇಹಿತರು ಹೇಳಿದರು, ಕೆಲವು ಕಡೆ ಮಾಡಿಸಿದ್ದಾರೆ. ಆದರೆ ಸರ್ಕಾರದ ಪರವಾಗಿ ಮಾಡಿಸಬೇಕಾದರೆ ಕೆಲವು ಸಂದರ್ಭಗಳಲ್ಲಿ ಜಿಜ್ಞಾಸೆ ಬರುತ್ತದೆ. ಇದು secular state ಎಂದು . . . . .

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಇದರ ಖರ್ಚಿಗೆ ಹಣವನ್ನು ಜನರಿಂದಲೂ ಕೇಳುತ್ತೇವೆ, ಸರ್ಕಾರದಿಂದಲೂ ಕೇಳುತ್ತೇವೆ.

ಶ್ರೀ ಎಂ. ಪಿ. ಈಶ್ವರಪ್ಪ.—ಸರ್ಕಾರದ ಹಣವನ್ನು ಖರ್ಚುಮಾಡಬಾರದು, ಜನರು ಬೇಕಾದರೆ ಮಾಡಲಿ.

ಶ್ರೀ ಎಚ್. ಕೆ. ವೀರಣ್ಣ ಗೌಡ.—ತಿರುಪತಿಯಲ್ಲಿ ಮಾಡಿಸಬೇಕಾದರೆ ಒಂದೂವರೆ ಸಾವಿರ ರೂಪಾಯಿ ಕೊಡಬೇಕಾಗುತ್ತದೆ.

ಶ್ರೀ ಎಂ. ಪಿ. ಈಶ್ವರಪ್ಪ.—ಈ ಕೆಲಸಕ್ಕೆ ತಿರುಪತಿಯಿಂದಲೇ ಹಣವನ್ನು ಕೊಡಬೇಕು.

ಶ್ರೀ ಎಚ್. ಕೆ. ವೀರಣ್ಣ ಗೌಡ.—ಮಹಾ ಜನರಿದ್ದಾರೆ; ಅವರು ಮುಂದೆ ಬರಬೇಕು. ಸರ್ಕಾರ ಚೋಕ್ ಗ್ಯಾಂಟು ಕೊಡಬಹುದು. ಸರ್ಕಾರಕ್ಕಿರುವಷ್ಟೇ ಜವಾಬ್ದಾರಿ ಮಹಾ ಜನರಿಗೂ ಇದೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸದ್ಯ, ಸೆಕ್ಯುಲರ್ ಸ್ಟೇಟ್ ಎಂದು ಹೇಳಿ, ಸರ್ಕಾರ ತಡೆಯದಿದ್ದರೆ ಸಾಕು.

ಶ್ರೀ ಎಚ್. ಕೆ. ವೀರಣ್ಣ ಗೌಡ.—ಡಿಸೆಂಬರ್‌ನಲ್ಲಿ ಆಗಬೇಕೆಂದು ಮಹಾ ಜನರು ಪ್ರಯತ್ನಮಾಡುತ್ತಿದ್ದಾರೆ. ಸರ್ಕಾರವೂ ಚೋಕ್ ಆಗಿ ಏನಾದರೂ ಕೊಡಬೇಕು.

ಶ್ರೀ ಎಂ. ಪಿ. ಈಶ್ವರಪ್ಪ.—ದೇವರಿಗೇನೂ ಲಂಚ ಕೊಡಬೇಕಾಗಿಲ್ಲ.

Sri M. P. L. SASTRY.—There is a large section of the public who still believe in these prayers. We would love the Government to give a contribution to such good causes in the interest of the public.

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರಾರ್ಥನೆ ಮಾಡುವುದರಿಂದ ಫಲ ಇದೆ ಎಂದು ಕೋರಿ ಬಂದು ದಕ್ಕೇ ಅದು ಯಶಸ್ವಿಯಾಗಿದೆ. ಕಡೆಯದಾಗಿ, ಶ್ರೀ ಬನುಮಯ್ಯನವರು ಉಪಯುಕ್ತವಾದ ಸಲಹೆ ಮಾಡಿದ್ದಾರೆ. ಮೆಟೀರಿಯಲಾಜಿಕಲ್ ಡಿಪಾರ್ಟ್‌ಮೆಂಟಿನವರನ್ನು ಕೇಳಿ, ಅಂಕಿ ಅಂಶಗಳ ವಿಷಯದಲ್ಲಿ ಗಮನ ಕೊಡಬೇಕು; ಹಳ್ಳ ಪ್ರದೇಶದಲ್ಲಿ ಮನೆ ಕಟ್ಟಲು ಅವಕಾಶ ಕೊಡಕೂಡದು; ನಂಜನಗೂಡಿನಲ್ಲಿ 50,000 ರೂಪಾಯಿ ನಷ್ಟವಾಗಿದೆ. ಮುನಿಸಿಪಾಲಿಟಿಯವರು ಹೇಗೆ ಲೈಸೆನ್ಸ್ ಕೊಟ್ಟರು; ತನಿಖೆ ಮಾಡಬೇಕೆಂದು ಹೇಳಿದರು. ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ, ಅನಂತರ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಎಫ್. ಕಟ್ಟೀಮನಿ.—ಕೇಂದ್ರ ಸರ್ಕಾರದಿಂದ ಸಹಾಯ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ನಮಗೆ ಸಮಾಚಾರ ಬಂದಿಲ್ಲ. ಜೋಕನ್ ಗ್ರ್ಯಾಂಟ್ 25 ಸಾವಿರ ರೂಪಾಯಿ ಆಗಲೇ ಕೊಟ್ಟಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರದವರಿಗೆ ಮನವರಿಕೆಯಾಗಿದೆ. ಎಷ್ಟು ಅನಾಹುತ ನಡೆದಿದೆ, ಹೊಂದರೆಯಾಗಿದೆ ಎಂಬ ವಿವರ ಕಳುಹಿಸಿ ಎಂದು ಕಾಗದ ಬರೆದಿದ್ದಾರೆ.

Sri M. P. ESWARAPPA.—I made a suggestion that Government should request the Prime Minister to undertake an areal survey of our flood-affected areas. Did our Government make that request to him?

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀ ಮಾನ್ ಈಶ್ವರಪ್ಪನವರು ಈ ರೀತಿ ಪದೇ ಪದೇ ಹೇಳುವುದು ಏಕೆ? ಅವರು ಅನುಭವನ್ವರಾದಂಥ ರಾಯರಾಗಿದ್ದಾರೆ; ಪ್ರಪಂಚದ ವ್ಯವಹಾರ ತಿಳಿದವರು. ಪ್ರೈಮ್ ಮಿನಿಸ್ಟರು ಬಂದ ಕೂಡಲೇ ಅವರಿಗೆ ಇನ್ನೇನೂ ಕೆಲಸವೇ ಇರುವುದಿಲ್ಲವೇ? ಮುಂಚಿತವಾಗಿಯೇ ನಿಗದಿಯಾಗಿರತಕ್ಕ ಕೆಲಸಗಳನ್ನೆಲ್ಲಾ ರದ್ದುಮಾಡಿ ನಮ್ಮ ಊರನ್ನು ಸುತ್ತಿ ಕೊಂಡು ಬನ್ನಿ ಎಂದು ನಾವು ಹೇಳಿದರೆ ಅವರು ಕೇಳುತ್ತಾರೆಯೇ?

Is it ever possible to change the programme of the Prime Minister?

ಶ್ರೀ ಎಂ. ಪಿ. ಈಶ್ವರಪ್ಪ.—ನೀವು ಅವರನ್ನು ಕೇಳಿದಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪಾರ್ಟಿಯೊಳಗೆ ತಿಳಿಸಿದ್ದಾಯಿತು. ನಡೆದಿರುವ ಅನಾಹುತದ ಕೆಲವು ಚಿತ್ರಗಳನ್ನು ಕೊಟ್ಟು ಅವರಿಗೆ ಮನವರಿಕೆ ಮಾಡಿದ್ದಾಗಿದೆ. ಅದೂ ಅಲ್ಲದೆ ಪ್ರೈಮ್ ಮಿನಿಸ್ಟರ್ ಅದ ಅವರನ್ನು overnight stay ಮಾಡಿ ಎಂದು ಒತ್ತಾಯಮಾಡಿ ನಿಲ್ಲಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲಾ ಶ್ರೀ ಈಶ್ವರಪ್ಪನವರು ತಿಳಿದುಕೊಳ್ಳದಿದ್ದರೆ ಇನ್ನಾರು ತಿಳಿದುಕೊಳ್ಳುತ್ತಾರೆ? ಆದುದರಿಂದ ಸರ್ಕಾರದವರು ಮಾಡಬೇಕಾದ ಕಾರ್ಯವನ್ನು ತಿಳಿಸಿದ್ದೀರಿ. ಶಕ್ತಿ ಇರುವಷ್ಟು ಮಾಡುತ್ತಾರೆ. ಕೆಲವು ನಿಂದರ್ಭದಲ್ಲಿ ಶಕ್ತಿ ಮೀರಿ ಕೂಡ ಈ ಪ್ರಶ್ನೆ ಬಗೆಹರಿಸುತ್ತಾರೆ. ಇನ್ನು ಹೆಚ್ಚು ಅನುಭವ ತಮಗೆ ಬಂದಮೇಲೆ ಆದರೆ ಮುಂದಿನ ಅಧಿವೇಶನದಲ್ಲಿ ಇದಕ್ಕೆ ಒಂದು ದಿವಸ ಅವಕಾಶ ಉತ್ತರೋತ್ತರ ಕೊಡಬೇಕೆನ್ನುವುದಾದರೆ ಅದನ್ನು ಮಾಡೋಣ. ಇವೊತ್ತು ಪ್ರವಾಹದ ಹಾವಳಿಯ ವಿಚಾರದಲ್ಲಿ ವಿಪುಲವಾದ ಚರ್ಚೆ ನಡೆದಿದೆ. ಮಾನ್ಯ ಸ್ನೇಹಿತರು ಅನೇಕ ಯೋಗ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸಲಹೆಗಳು ಈಗ ನಾನಾಗಲೇ ಹೇಳಿದ ಹಾಗೆ ಹಣ ಕಾಸಿನ ದೃಷ್ಟಿಯಿಂದ ಅಸಾಧ್ಯವಾಗಿ ಕಂಡರೆ ಉತ್ತರೋತ್ತರ ಹಂತ ಹಂತವಾಗಿ ಏರ್ಪಾಡು ಮಾಡುವುದಕ್ಕೆ ಸಾಧ್ಯವಾಗಬಹುದೇ ಎಂಬುದನ್ನು ಪರಿಶೀಲನೆ ಮಾಡೋಣ. ಮತ್ತು ಅನೇಕ ಸಲಹೆಗಳು ಮತ್ತು ಟೀಕೆಗಳು ಏನಿವೆ ಅವುಗಳೆಲ್ಲ ತಿರುಳೇ ಇಲ್ಲ ಎಂದು ನಾನು ಹೇಳುವುದಕ್ಕೆ ಸಿದ್ಧವಾಗಿಲ್ಲ—ಟೀಕೆಯ ಮೂಲಕ ಸಲಹೆ ಮಾಡಿದ್ದಾರೆ. ಅವನ್ನು ಗಮನಕ್ಕೆ ತೆಗೆದುಕೊಂಡು ಎಷ್ಟು ಮಟ್ಟಿಗೆ ಈ ಕಷ್ಟ ಕಾಲದಲ್ಲಿ ನೆರವಿಗೆ ಬರಬೇಕು; ಮುಂದೆ ಕಷ್ಟ ಬಾರದ ಹಾಗೆ ಏನುಮಾಡಬೇಕು ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡುತ್ತಾರೆ ಎಂದು ಭರವಸೆ ಕೊಟ್ಟು ಅನೇಕ ವಿಷಯಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಕ್ಕಾಗಿ ಎಲ್ಲ ಸದಸ್ಯರಿಗೂ ಮತ್ತೊಮ್ಮೆ ವಂದನೆಗಳನ್ನರ್ಪಿಸಿ ನನ್ನ ಈ ಮಾತನ್ನು ಮುಗಿಸುತ್ತೇನೆ.

KSA LIBRARY, B'lore
B005050
328.32402 548 LAD,1961
JJ33

WD 5548—GPB—500—15-9-61